

ಮಧುಗಿರಿ ರಾಮು

Madhugiri Ramu



ಕರ್ನಾಟಕ ಲಲಿತಕಲಾ ಅಕಾಡೆಮಿ

KARNATAKA LALITHAKALA ACADEMY



ಯು. ಎಸ್. ವೆಂಕಟರಾಮನ್

ಯು. ಎಸ್. ವೆಂಕಟರಾಮನ್ ಅವರು ಮಾಸ್ಕೋದಲ್ಲಿನ ಟ್ರೇಡ್ ಯೂನಿಯನ್ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದಾರಲ್ಲದೆ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದಾರೆ. ಎಂ.ಟಿ.ವಿ. ಆಚಾರ್ಯರ ಬಳಿ ಕಲಾಶಿಕ್ಷಣ ಪಡೆದಿದ್ದಾರೆ. ಇವರು ಮುಖ್ಯವಾಗಿ ಕಾರ್ಮಿಕ ಕ್ಷೇತ್ರದಲ್ಲಿ ದುಡಿದಿದ್ದರೂ ಅದರೊಂದಿಗೆ ಕಲಾಕ್ಷೇತ್ರದಲ್ಲೂ ದುಡಿದಿದ್ದಾರೆ. ಆಗಾಗ ಲೇಖನಗಳನ್ನೂ ಬರೆದಿರುವ ಶ್ರೀಯುತರು ಕಲಾ ಸಂಘಟನೆಗಳಲ್ಲಿಯೂ ಸಕ್ರಿಯ ಪಾತ್ರ ವಹಿಸಿದ್ದಾರೆ. ಪ್ರಸ್ತುತ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಉಪಾಧ್ಯಕ್ಷರಲ್ಲೊಬ್ಬರಾಗಿರುವ ಇವರು ಮಧುಗಿರಿ ರಾಮು ಅವರನ್ನು ಹತ್ತಿರದಿಂದ ಬಲ್ಲವರು.

ಮಧುಗಿರಿ ರಾಮು

Madhugiri Ramu

ಯು. ಎಸ್. ವೆಂಕಟರಾಮನ್

U. S. Venkataraman

ಕರ್ನಾಟಕ ಲಲಿತಕಲಾ ಅಕಾಡೆಮಿ

ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

Karnataka Lalithakala Academy

Nrupatunga Road, Bangalore - 560 002

Madhugiri Ramu
Monograph by Sri U.S.Venkataraman
Published by K. Mukundan, Registrar,
Karnataka Lalithakala Academy,
Nrupathunga Road, Bangalore - 560 002.

First Impression : 1997
Copies : 1000

Price : Rs. 10.00

ಗೌರವ ಸಂಪಾದಕರು

ಶ್ರೀ ಸಿ. ಚಂದ್ರಶೇಖರ

ಸಂಪಾದಕರು

ಶ್ರೀ ಚಿ. ಸು. ಕೃಷ್ಣ ಸೆಟ್ಟಿ

ಪ್ರಕಟಣಾ ಸಮಿತಿ

ಶ್ರೀ ಆರ್. ಜಿ. ರಾಯ್ಕರ್
ಶ್ರೀ ಚಿ. ಸು. ಕೃಷ್ಣ ಸೆಟ್ಟಿ
ಶ್ರೀ ಶೀಲಾಕಾಂತ ಪತ್ತಾರ್
ಶ್ರೀ ಅರವಿಂದ ಕಟ್ಟಿ
ಶ್ರೀ ಸಿ. ಬಿ. ಕಾಚಾಪುರ

Printed by Brindavan Printers and Publishers (P) Ltd.
Lalbagh Fort Road, Bangalore - 560 004

ಒಂದು ಮಾತು


ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲಿ ರಾಜ್ಯದ ಹಿರಿಯ ಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸುವುದೂ ಒಂದು. ಈ ಪುಸ್ತಕಗಳು ಆ ಹೆಸರಾಂತ ಕಲಾವಿದರ, ಅವರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದ ಕಲೆಯು ಬೆಳೆದು ಬಂದ ದಾರಿ ಮತ್ತು ಅವರ ಜೀವನ ಚರಿತ್ರೆಯ ಬಗ್ಗೆ ತಿಳುವಳಿಕೆ ಉಂಟು ಮಾಡಲು ಸಹಾಯಕವಾಗಬಲ್ಲುದು.

ಈ ಯೋಜನೆಯಲ್ಲಿ ಈಗಾಗಲೇ ಸುಮಾರು 40 ಪುಸ್ತಕಗಳು ಪ್ರಕಟಗೊಂಡಿದ್ದು ಇನ್ನೂ ಹಲವು ಪುಸ್ತಕಗಳು ಹೊರಬರಲಿವೆ. ಈ ಮಾಲಿಕೆಯು ಅತ್ಯಂತ ಜನಪ್ರಿಯವಾಗಿದ್ದು ಅನೇಕ ಪುಸ್ತಕಗಳು ಪುನರ್ ಮುದ್ರಣವಾಗಿರುವುದು, ಅವುಗಳ ಅವಶ್ಯಕತೆ ಸಾರ್ಥಕತೆಗಳ ದ್ಯೋತಕ.

ಈ ಪುಸ್ತಕಗಳನ್ನು ರಚಿಸಲು ಆರಿಸಿರುವ ಬರಹಗಾರರು ಕಲೆಯ ವಿಷಯ ಮತ್ತು ಆಯಾ ಕಲಾವಿದರ ಜೀವನ, ಕೃತಿಯ ಬಗ್ಗೆ ಹೆಚ್ಚು ಅರಿತಿರುವವರು. ಪ್ರಸ್ತುತ, ಈ ಪುಸ್ತಕ ನಾಡಿನ ಹಿರಿಯ ಕಲಾವಿದರಾದ ಶ್ರೀ ಮಧುಗಿರಿ ರಾಮು ಅವರ ಬಗ್ಗೆಯಾಗಿದ್ದು ಅವರು ಚಿತ್ರಕಲಾ ಪ್ರಪಂಚದಲ್ಲಿ ಮಾಡಿರುವ ಸಾಧನೆ ಅಪಾರ. ಈ ಕೃತಿಯನ್ನು ರಚಿಸಿರುವ ಶ್ರೀ ಯು.ಎಸ್. ವೆಂಕಂಟರಾಮನ್ ಅವರು ಕಲಾ ಬರಹಗಾರರಾಗಿದ್ದು ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಅವರಿಗೂ ಹಾಗೂ ಈ ಪುಸ್ತಕದ ಸಂಪಾದಕರಾದ ಶ್ರೀ ಚಿ. ಸು. ಕೃಷ್ಣ ಸೆಟ್ಟಿ ಅವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಎಂದಿನಂತೆ ಕಲಾರಸಿಕರು, ಸಾಹಿತ್ಯಾಭಿಮಾನಿಗಳು ಈ ಕೃತಿಯನ್ನು ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಸಿ. ಚಂದ್ರಶೇಖರ
ಅಧ್ಯಕ್ಷರು ಹಾಗೂ ಗೌರವ ಸಂಪಾದಕರು
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು



ಮಧುಗಿರಿ ರಾಮು

ಮಧುಗಿರಿ ರಾಮು

ಸಂಗೀತ, ನಾಟಕ ಮೊದಲಾದ ಲಲಿತ ಕಲೆಗಳಲ್ಲಿ ಹವ್ಯಾಸಿಯಾಗಿ ತೊಡಗಿದರೂ, ನಂತರ ಕಲಾಭ್ಯಾಸ ಮಾಡಿ ಚಿತ್ರಕಲೆಯಲ್ಲಿ ಪರಿಣಿತರಾದ ಬಹುಮುಖ ಪ್ರತಿಭೆಯ ಕಲಾವಿದರು ಶ್ರೀ ಎಂ.ಎಚ್. ರಾಮು ಅಥವಾ ಮಧುಗಿರಿ ರಾಮುರವರು. ಇವರು ತಮ್ಮ ಸ್ವಂತ ಸಾಧನೆ, ಸಾಮರ್ಥ್ಯ ಮತ್ತು ಆತ್ಮೀಯರ ಬೆಂಬಲದಿಂದ ಅಪಾರ ಕೀರ್ತಿಗಳಿಸಿ ಕರ್ನಾಟಕದ ಹೆಮ್ಮೆಯ ಕಲಾವಿದರೆನಿಸಿಕೊಂಡಿದ್ದಾರೆ.

ರಾಮುರವರು ತೈಲವರ್ಣ ಭಾವಚಿತ್ರಗಳ ರಚನೆಯಲ್ಲಿ ವೈಶಿಷ್ಟ್ಯ ಹೊಂದಿರುವುದರಿಂದ ಶ್ರೀರಾಮುರವರೆಂದರೆ ಭಾವಚಿತ್ರ, ಭಾವಚಿತ್ರವೆಂದರೆ ಶ್ರೀ ರಾಮು ಅನ್ನುವ ಮಟ್ಟಿಗೆ ಅವರ ಹೆಸರು ಪ್ರಸಿದ್ಧ. ರಾಮುರವರು ಕಲೆಗಾಗಿ ಸಲ್ಲಿಸಿರುವ ಸೇವೆಗಾಗಿ, ಅವರಿಗೆ ದೊರೆತಿರುವ ಪ್ರಶಸ್ತಿಗಳು, ಬಹುಮಾನಗಳು, ಸನ್ಮಾನ, ಪುರಸ್ಕಾರಗಳು ಅಪರಿಮಿತ. ಇವರ ಪೂರ್ಣ ಹೆಸರು ಮಧುಗಿರಿ ಹನುಮಂತಪ್ಪ ರಾಮು. ಆದರೆ ರಾಮು ಎಂಬ ಹೆಸರಿನಲ್ಲೇ ಪ್ರಖ್ಯಾತರಾಗಿದ್ದಾರೆ.

ಬಾಲ್ಯಾವಸ್ಥೆ ಮತ್ತು ತರುಣಾವಸ್ಥೆಯಲ್ಲಿ ಕಷ್ಟ-ಕಾರ್ಪಣ್ಯಗಳಿಂದ ಬಳಲಿ ಬಂಧು-ಬಳಗದವರ, ಹಿತೈಷಿಗಳ, ಆಪ್ತರ ನೆರವು ಮತ್ತು ಪೋಷಣೆ ಹಾಗೂ ಜೀವನದಲ್ಲಿ ಮುಂದೆ ಬರಲೇಬೇಕೆಂಬ ಧೃತಿಗೆಡದ ಕೆಚ್ಚೆದೆ, ರಾಮುರವರ ಜೀವನವನ್ನು ರೂಪಿಸಿದವು. ಇವರ ಜೀವನ ರೋಮಾಂಚಕಾರಿಯಾಗಿದೆ.

ಬಾಲ್ಯ

ರಾಮುರವರು 1919ರ ನವೆಂಬರ್ 5ರಂದು ಉತ್ಥಾನ ದ್ವಾದಶಿ ದಿನದಂದು ಮಧುಗಿರಿಯಲ್ಲಿ ಹುಟ್ಟಿದರು. ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ಸುಮಾರು ಅರವತ್ತು ಮೈಲಿ ದೂರದಲ್ಲಿರುವ ಮಧುಗಿರಿ, ತುಮಕೂರು ಜಿಲ್ಲೆಗೆ ಸೇರಿದ ತಾಲ್ಲೂಕು ಕೇಂದ್ರ. ಇದು ಐತಿಹಾಸಿಕ ಪ್ರಸಿದ್ಧ ಸ್ಥಳವಾಗಿದೆಯಲ್ಲದೆ ನೊಳಂಬರು ಆಳಿದ ಸ್ಥಳವೂ ಆಗಿದೆ. ಇದು ಬೆಟ್ಟಗುಡ್ಡಗಳಿಂದ ಆವರಿಸಲ್ಪಟ್ಟು ಹುಲುಸಾದ ಕಾಡು ಸುತ್ತಮುತ್ತಲಿನಲ್ಲಿತ್ತು. ಆಗ ಕಾಡಿನಲ್ಲಿ ಹುಲಿ, ಚಿರತೆ, ತೋಳ, ಕರಡಿ ಸಾಕಷ್ಟು ಪ್ರಮಾಣದಲ್ಲಿದ್ದವು. ಇಡೀ ಏಷ್ಯಾ ಖಂಡದಲ್ಲಿಯೇ ದೊಡ್ಡದು ಎನ್ನಲಾದ (ಎತ್ತರ ಮತ್ತು ಅಗಲದಲ್ಲಿ) ಅಖಂಡ ಬೆಟ್ಟ ಇಲ್ಲಿದೆ. ಊರಿನ ತುಂಬ ಕಲ್ಯಾಣಿಗಳು, ದೇವಸ್ಥಾನಗಳಿವೆ. ಪ್ರಾಚೀನ ಏಳು ಸುತ್ತಿನ ಕೋಟೆಯಿದೆ. ಬೆಟ್ಟದ ಮೇಲೆ ದೇವರ ವಿಗ್ರಹವಿಲ್ಲದ ದೇವಸ್ಥಾನವಿದೆ. ವಿಜಯನಗರ ಕಾಲದಲ್ಲಿ ನಡೆಯುತ್ತಿದ್ದ ಉತ್ಸವಗಳು ಈಗಲೂ ಅಲ್ಲಿ ಕರಾರುವಾಕ್ಕಾಗಿ ನಡೆಯುತ್ತವೆ. ರಾಮುರವರು ಹುಟ್ಟಿದ ಪರಿಸರ ಇದಾಗಿತ್ತು.

ಪಶುಪಾಲನೆ, ಕೃಷಿಯಲ್ಲಿ ನಿರತರಾಗಿದ್ದ ಗೊಲ್ಲರ ಮನೆತನದಲ್ಲಿ ರಾಮು ಹುಟ್ಟಿದ್ದು, ಇವರ ತಾಯಿ ಲಕ್ಷ್ಮಿದೇವಮ್ಮ. ಆದರೆ ಲಕ್ಷ್ಮಕ್ಕ ಎಂಬುದೇ ವಾಡಿಕೆಯ ಹೆಸರಾಗಿತ್ತು. ತಂದೆಯವರಾದ ಹನುಮಂತಪ್ಪನವರು ತಮ್ಮ ಮಕ್ಕಳು ಇನ್ನೂ ಚಿಕ್ಕವರಾಗಿದ್ದಾಗಲೇ ಮೃತಪಟ್ಟರು. ಇವರಣ್ಣ ಹನುಮಂತರಾಯಪ್ಪ ದರ್ಜಿ ವೃತ್ತಿ ಮಾಡುತ್ತಿದ್ದರು. ಇವರಕ್ಕ ಹನುಮಕ್ಕ ಉಪಾಧ್ಯಾಯಿನಿ, ತಂದೆಯವರ ಅಕಾಲ ಮರಣದಿಂದ ಸಂಸಾರದ ಹೊಣೆ ತಾಯಿಯವರೇ

ಹೊರಬೇಕಾಯಿತು. ರಾಮುರವರ ಅಜ್ಜಿ, ತಾಯಿ, ಕೂಲಿನಾಲಿ ಮಾಡಿ ರಾಮುರವರನ್ನು ಸಾಕಿದರು. ಇವರ ಕುಟುಂಬ ಮಾರುತಿ ದೇವರ ಒಕ್ಕಲಾದ್ದರಿಂದ ಅಕ್ಕ, ಅಣ್ಣ ಎಲ್ಲರಿಗೂ ಹನುಮಂತ ದೇವರ ಹೆಸರನ್ನಿಡಲಾಯಿತು.

ವಿದ್ಯಾಭ್ಯಾಸ

ರಾಮುರವರು ಮಧುಗಿರಿ ಕೋಟೆ ಮುಂದಿರುವ ಕೋಟೆ ಪ್ರಾಥಮಿಕ ಶಾಲೆಯಲ್ಲೂ, ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲೂ ಓದಿದರು. ನಂತರ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮುಂದುವರೆಸಿ 1935ರಲ್ಲಿ ಎಸ್.ಎಸ್.ಎಲ್.ಸಿ. ವರೆಗಿನ ವ್ಯಾಸಂಗ ಮುಗಿಸಿದರು.

ವಿದ್ಯಾಭ್ಯಾಸ ಕಾಲದಲ್ಲಿ ಶಾಲೆಗೆ ರಜೆ ಬಂದರೆ ಸಾಕು, ಪ್ರಕೃತಿ ಸೌಂದರ್ಯದ ಬೀಡಾದ ಮಧುಗಿರಿಯ ಸುತ್ತಮುತ್ತಲಿನ ಬೆಟ್ಟಗುಡ್ಡಗಳಲ್ಲಿ ನಿರ್ಭಯವಾಗಿ ಅಲೆದಾಡುತ್ತಿದ್ದರು. ಕಾಡಿನಲ್ಲಿ ಬೆಳೆದ ಸೀತಾಫಲ, ನೆರೇಹಣ್ಣು, (ಗೋಲಿ ಗಾತ್ರದ ಕೆಂಪು ಮಿಶ್ರಿತ ಹಳದಿ ಬಣ್ಣವಿರುವ ಹಣ್ಣು) ಕಾರೇ ಹಣ್ಣು ಮತ್ತು ಕಲ್ಲು ಬಂಡೆಗಳ ಬಿರುಕಿನಲ್ಲಿ ಹಾಗೂ ಮರಗಳ ಮೇಲೆ ಕಟ್ಟಿರುವ ಜೇನು ಮೊದಲಾದವುಗಳನ್ನು ಕಿತ್ತು, ಅವರೂ ಮತ್ತು ಅವರ ಮಿತ್ರರು ತಿನ್ನುತ್ತಿದ್ದರು. ಹೆಚ್ಚಿಗೆ ಉಳಿದಿದ್ದನ್ನು ಊರಿಗೆ ತಂದು ಕೇರಿ ಜನಕ್ಕೂ ಹಂಚುತ್ತಿದ್ದರು. ಇದರೊಡನೆ ಸುವಾಸನಾಭರಿತ ಜಾಲಾರಿ ಹೂಗಳನ್ನು ತಂದು ಅಕ್ಕಪಕ್ಕದವರಿಗೆ ಹಂಚುತ್ತಿದ್ದರು. ಅಲ್ಲದೆ ಮನೆಗೆ ಅಗತ್ಯವಾಗುವಷ್ಟು ಸೌದೆಯನ್ನು ಕಾಡಿನಲ್ಲಿ ಕಡಿದು ಮನೆಗೆ ತಂದು ಹಾಕುತ್ತಿದ್ದರು. ಆ ಕಾರಣದಿಂದ ನೆರೆಹೊರೆಯವರ ಮತ್ತು ತಮ್ಮ ಮನೆಯವರ ಪ್ರೀತಿ ವಾತ್ಸಲ್ಯಗಳನ್ನು ಗಳಿಸಿದ್ದರು. ಆಗ ಅವರ

ಮಿತ್ರರೊಂದಿಗೆ ಈಜುವುದು, ಅಂಗಸಾಧನೆ, ಇವುಗಳಲ್ಲಿ ತೊಡಗಿ ಉತ್ತಮ ದೇಹದಾರ್ಢ್ಯ ಪಡೆದಿದ್ದರು. ಅಂತೆಯೇ ಅವರ ಎದೆಗಾರಿಕೆ ಅಸಾಧಾರಣವಾಗಿತ್ತು. ಸುತ್ತಲಿನ ಕಾಡಿನಲ್ಲಿನ ಹುಲಿ, ಚಿರತೆ, ತೋಳ ಮೊದಲಾದ ಕ್ರೂರ ಮೃಗಗಳನ್ನು ಲೆಕ್ಕಿಸದೆ ಕಾಡಿನಲ್ಲಿ ನಿರ್ಭಯವಾಗಿ ನುಗ್ಗುತ್ತಿದ್ದರು.

ಶಾಲೆಯಲ್ಲಿ ಓದುತ್ತಿದ್ದಂತೆಯೇ ಶಾಲಾ ಸಮಾರಂಭಗಳಲ್ಲಿ ದೇವತಾ ಪ್ರಾರ್ಥನೆ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅವರ ಬೀದಿಯಲ್ಲಿನ ಕೆಲವು ಕಲಾಪ್ರೇಮಿಗಳು, ರಸಿಕರು ಸೇರಿ ಒಮ್ಮೆ "ಕವಿರತ್ನ ಕಾಳಿದಾಸ" ನಾಟಕವನ್ನು ಆಡಿದರು. ಅವರು ಕ್ರಮೇಣ ಬೆಳೆಯುತ್ತಾ ಸ್ತ್ರೀ ಪಾತ್ರಗಳಿಗೆ ಮೀಸಲಾದರು. ಇದರಲ್ಲಿ ಮುಖ್ಯವಾಗಿ "ಭಕ್ತ ಅಜಮಿಳ" ನಾಟಕದಲ್ಲಿ ಪ್ರಧಾನ ಸ್ತ್ರೀ ಪಾತ್ರವನ್ನು ವಹಿಸಿದರು. ಈ ನಾಟಕದ ಕರ್ತೃ ಶ್ರೀ ದಾಸಪ್ಪನವರು. ಶ್ರೀದಾಸಪ್ಪನವರು ರಾಮುರವರ ಗುರುಗಳು ಮಾತ್ರವಲ್ಲದೆ ಅವರ ಹಿತೈಷಿಯಾಗಿದ್ದರಿಂದ ಅವರ ಬಗ್ಗೆ ಒಂದೆರಡು ಮಾತು ಹೇಳುವುದು ಅಸಂಗತವಲ್ಲ. ಶ್ರೀ ಎಂ.ಎಸ್. ದಾಸಪ್ಪನವರು (ಇವರನ್ನು ರಾಮದಾಸಪ್ಪ ಎಂದು ಸಹ ಕರೆಯುತ್ತಿದ್ದರು) ಕರ್ನಾಟಕ ಚಿತ್ರಕಲಾ ಪರಿಷತ್ತಿನ ಸಂಸ್ಥಾಪಕ ಕಾರ್ಯದರ್ಶಿ ಶ್ರೀ ಎಂ.ಎಸ್. ನಂಜುಂಡರಾಯರ ತಂದೆಯವರು. ದಾಸಪ್ಪನರು ಹಳ್ಳಿಯ ಶಾಲಾ ಉಪಾಧ್ಯಾಯರಾಗಿದ್ದರು. ಆದರೆ ಅವರ ಕಾರ್ಯಬಾಹುಳ್ಯ ವಿಸ್ತಾರವಾಗಿದ್ದು, ಸಂಗೀತ, ಸಾಹಿತ್ಯ, ನಾಟಕ, ಚಿತ್ರಕಲೆ, ಹರಿಕಥೆ, ಇವುಗಳಲ್ಲಿ ತಮ್ಮ ವಿರಾಮ ಕಾಲವನ್ನು ವಿನಿಯೋಗಿಸುತ್ತಿದ್ದರು. ರಾಮುರವರಿಗೆ ಈ ಎಲ್ಲಾ ಕಲೆಗಳಲ್ಲಿ ಆಸಕ್ತಿ ಹುಟ್ಟಿಸಿ, ಚಿತ್ರಕಲೆಗೆ ದಾಸಪ್ಪನವರು ಓ ನಾಮ ಹಾಕಿಕೊಟ್ಟರು. ಒಟ್ಟಾರೆ ಬಾಲ್ಯದಿಂದಲೇ ರಾಮುರವರಿಗೆ ಸಂಗೀತ ಮತ್ತು ಚಿತ್ರಕಲೆಗಳಲ್ಲಿ ಆಸಕ್ತಿ

ಬೆಳೆಯುವುದರೊಂದಿಗೆ ಪ್ರತ್ಯಕ್ಷ ಅನುಭವ ಸಹ ಉಂಟಾಯಿತು. ಊರಿನಲ್ಲಿ ನಡೆಯುತ್ತಿದ್ದ ಗಣೇಶ ಉತ್ಸವ, ರಾಮ ನವಮಿ ಮೊದಲಾದ ಉತ್ಸವಗಳಲ್ಲಿ ಸುಶ್ರಾವ್ಯವಾಗಿ ಹಾಡುತ್ತಿದ್ದರಿಂದ, ಗೆಳೆಯರು, ಫ್ಯಾನ್‌ಗಳ ಸಮೂಹ ಬೆಳೆಯುತ್ತಾ ಹೋಯಿತು. ಈ ಗೆಳೆಯರ ಗುಂಪಿನಲ್ಲಿ ಒಳ್ಳೆಯವರು, ಕೆಟ್ಟವರು ಇಬ್ಬರೂ ಇದ್ದರು. ಈ ಕೆಟ್ಟ ಜನರ ಸಹವಾಸದಿಂದ ರಾಮು ಅವರು ಅಡ್ಡದಾರಿಗೆ ಎಳೆಯಲ್ಪಟ್ಟರು. ಇದರಿಂದಾಗಿ ಒಳ್ಳೆಯ ಹೆಸರಿನೊಂದಿಗೆ ಕೆಟ್ಟ ಹೆಸರು ಅಂಟಿಕೊಂಡಿತು. ಕಂಡ ಕಂಡ ಹಿತೈಷಿಗಳೆಲ್ಲಾ ''ಅಯ್ಯಾ ರಾಮು, ಮೊದಲು ನೀನು ಈ ಊರು ಬಿಡು'' ಎನ್ನುವುದೇ ಜಾಸ್ತಿಯಾಯಿತು. ಇಂತಹ ದಿಕ್ಕು ತೋಚದ ಸಂದರ್ಭದಲ್ಲಿ ಅವರನ್ನು ಹೆಚ್ಚು ಪ್ರೀತಿಸುತ್ತಿದ್ದ ಶ್ರೀ ದಾಸಪ್ಪನವರು ಕರೆದು ತಲೆಯನ್ನು ನೀವಿ ಹೇಳಿದರು ''ರಾಮು ನೀನು ಒಳ್ಳೆಯವ, ನಿರಪರಾಧಿ, ಆದರೆ ನಿನ್ನ ಕೆಟ್ಟ ಸಹವಾಸದಿಂದ ಕೆಟ್ಟ ಹೆಸರಿಗೆ ಕಾರಣವಾಗಿದೆ. ನೀನು ಈ ಊರು ಬಿಟ್ಟು ಮೈಸೂರಿಗೆ ಹೋಗು, ಅಲ್ಲಿ ನಿನ್ನಲ್ಲಿ ಅಂಟಿಕೊಂಡಿರುವ ಸಂಗೀತ, ನಾಟಕ, ಚಿತ್ರಕಲೆ, ಇವುಗಳಲ್ಲಿ ಯಾವುದಾದರೂ ಒಂದನ್ನು ಚೆನ್ನಾಗಿ ಅಭ್ಯಸಿಸಿ ಖ್ಯಾತನಾಗು. ಮೈಸೂರು ರಾಜಧಾನಿ, ಮುಂದೆ ನಿನಗೆ ರಾಜಾಶ್ರಯ ದೊರೆತರೂ ದೊರಕಬಹುದು. ಯಾವುದಕ್ಕೂ ಹೆದರಬೇಡ. ಧೈರ್ಯವಾಗಿ ಮುನ್ನುಗ್ಗು'' ಹೀಗೆಲ್ಲಾ ಹೇಳಿ ಧೈರ್ಯ ತುಂಬಿ ಪ್ರೋತ್ಸಾಹಿಸಿದರು. ಇದೇ ರೀತಿ ಪ್ರೀತಿಯಿಂದ ಕಾಣುತ್ತಿದ್ದ ಹೈಸ್ಕೂಲಿನಲ್ಲಿ ಡ್ರಾಯಿಂಗ್ ಮಾಸ್ಟರಾಗಿದ್ದ ಶ್ರೀ ರಾಮಯ್ಯನವರು, ದಾಸಪ್ಪನವರ ಸೂಚನೆಯನ್ನು ಅನುಮೋದಿಸಿದರು. ಇಂತಹ ವಿಷಮ ಪರಿಸ್ಥಿತಿಯಲ್ಲಿ ರಾಮುರವರು ತಮ್ಮ ಜನ್ಮಸ್ಥಳ ಅಚ್ಚುಮೆಚ್ಚಿನ ಮಧುಗಿರಿಯನ್ನು ಬಿಟ್ಟು ಮೈಸೂರಿಗೆ ವಲಸೆ ಹೋದರು.

ಮೈಸೂರಿನಲ್ಲಿ

ಮೈಸೂರಿನಲ್ಲಿ 1935ರಲ್ಲಿ ಎಸ್.ಎಸ್.ಎಲ್.ಸಿ ವರೆಗೆ ವ್ಯಾಸಂ
ಮುಗಿಸಿದ್ದ ರಾಮುರವರು ಮೇಲ್ಕಾಣಿಸಿದ ಹಿನ್ನೆಲೆಯಲ್ಲಿ 1937ರಲ್ಲಿ
ಮೈಸೂರನ್ನು ಸೇರಿದರು. ರಾಮುರವರ ಸಂಬಂಧಿ, ಮಧುಗಿರಿಯವರ
ಆಗಿದ್ದ ಶ್ರೀ ಸಿದ್ಧಪ್ಪನವರು ಮೈಸೂರಿನಲ್ಲಿ ಸರ್ವೆಯರ್
ಉದ್ಯೋಗದಲ್ಲಿದ್ದರು. ಅವರು ನಾಟಕ ಪ್ರಿಯರಾಗಿದ್ದರು. ರಾಮುರವರು
ಅವರನ್ನು ಸಂಧಿಸಿ ಆಶ್ರಯ ಕೋರಿದಾಗ ಕಿಂಚಿತ್ತೂ ಹಿಂದೆಗೆಯದ
ಎಲ್ಲಾ ರೀತಿಯ ಅನುಕೂಲಗಳನ್ನು ಒದಗಿಸಲು ಒಪ್ಪಿದರು. ಅವರ
ಊಟ ವಸತಿಗಳ ಏರ್ಪಾಡು ಮಾಡಿದರು. ಶ್ರೀ ಸಿದ್ಧಪ್ಪನವರ
ಔದಾರ್ಯವನ್ನು ರಾಮುರವರು ಸದಾಕಾಲ ಸ್ಮರಿಸುತ್ತಾರೆ. ಚಿತ್ರಕಲ
ಕಲಿಯಬೇಕೆಂದು ರಾಮುರವರು ತಮ್ಮ ಅಭಿಲಾಷೆಯನ್ನು ತಿಳಿಸಿದಾ
ಶ್ರೀಸಿದ್ಧಪ್ಪನವರು ಬೆನ್ನುತಟ್ಟಿ ಪ್ರೋತ್ಸಾಹಿಸಿ ಅವರೇ ಮೈಸೂರಿನ
ಚಾಮರಾಜೇಂದ್ರ ವೃತ್ತಿ ಶಿಕ್ಷಣ ಕಲಾ ಶಾಲೆಗೆ ಸೇರಿಸಿದರು. ಮುಂದೆ ಶ್ರೀ
ಸಿದ್ಧಪ್ಪನವರ ಋಣ ತೀರಿಸಲೋ ಎಂಬಂತೆ ಅವರ ಮಗ
ರಾಜಾಶಂಕರ್‌ರವರು ಚಲನಚಿತ್ರ ನಟರಾಗುವಂತೆ ಅಗತ್ಯವಾಗುವ
ಎಲ್ಲಾ ನೆರವನ್ನು ರಾಮು ನೀಡಿದರು.

ಕಲಾಶಾಲೆಯಲ್ಲಿ ಎರಡನೇ ತರಗತಿಯಲ್ಲಿ ಓದುತ್ತಿದ್ದಾಗ
ರಾಮುರವರ ತಾಯಿ ಮೃತಪಟ್ಟರು. ಇದಲ್ಲದೆ ಮುಂದಿನ ದಿನಗಳಲ್ಲಿ
ವಸತಿ ಊಟೋಪಚಾರಗಳ ತಾಪತ್ರಯ ಒದಗಿತು. ಕಾರಣವೇನೆಂದರೆ
ಅವರ ಆತ್ಮೀಯ ಬಂಧುಗಳಾದ ಸಿದ್ಧಪ್ಪನವರಿಗೆ ಇನ್ನೊಂದೆಡೆಗೆ
ಕೆಲಸದ ವರ್ಗಾವಣೆಯಾಯಿತು. ಊಟ ವಸತಿಗಳ ಬವಣೆ
ಆರಂಭವಾಯಿತು. ಇತರೆ ಯಾರೇ ಸ್ನೇಹಿತರಾಗಲಿ ಅಥವಾ

ಸಂಬಂಧಿಗಳಾಗಲೀ ಪೋಷಣೆ ಮಾಡುವ ಸಾಧ್ಯವಿಲ್ಲವಾದ್ದರಿಂದ ತಮ್ಮ ಸ್ವಂತ ಕಾಲಿನ ಮೇಲೆ ನಿಂತು ಹೊಟ್ಟೆ ಪಾಡು ಕಳೆಯುವ ಮತ್ತು ಕಲಾಭ್ಯಾಸವನ್ನು ಮುಂದುವರಿಸುವ ಸನ್ನಿವೇಶ ಒದಗಿತು. ತತ್ಸಮಯದಲ್ಲಿ ಸ್ವಲ್ಪ ಕಂಗೆಟ್ಟಿದ್ದರೂ ಧೃತಿಗೆಡದೆ ಸ್ವಂತ ವರಮಾನ ಗಳಿಸುವ ಯೋಚನೆ ಮಾಡಿದರು. ಇದರಂತೆ ಶಾಲಾ ಕಾಲ ಮುಗಿದ ಮೇಲೆ ಸೈನ್ ಬೋರ್ಡ್ ಮತ್ತಿತರ ವಾಣಿಜ್ಯ ಕಲೆಗಳಲ್ಲಿ ನಿರತರಾಗಿ, ಹೊಟ್ಟೆ ಬಟ್ಟೆಗಾಗುವಷ್ಟು ಮಾತ್ರವಲ್ಲದೆ ಚಿತ್ರ ಕಲಾಭ್ಯಾಸಕ್ಕೆ ಅಗತ್ಯವಾಗುವ ಬಣ್ಣ, ಬ್ರಷ್‌ಗಳನ್ನು ಕೊಳ್ಳುವಷ್ಟು ಹಣ ಸಂಪಾದಿಸತೊಡಗಿದರು.

ಚಾಮರಾಜೇಂದ್ರ ಕಲಾಶಾಲೆಯಲ್ಲಿ ಖ್ಯಾತನಾಮರೂ ಪರಿಣಿತರೂ ಆದ ವೈ.ಸುಬ್ರಮಣ್ಯರಾಜು, ಎನ್.ಜಿ. ಟಂಕಸಾಲೆ, ಪಾವಂಜೆ ಮೊದಲಾದ ಗುರುಗಳ ತರಬೇತಿಯಲ್ಲಿ ರಾಮುರವರ ಕಲಾಭ್ಯಾಸ ಮುಂದುವರೆಯಿತು. ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ ರಾಮುರವರಿಗೆ ಭಾವಚಿತ್ರ ರಚನೆ ಮತ್ತು ಫಿಗರ್ ಕಾಂಪೊಸಿಷನ್ಸ್ ಬಹಳ ಹಿಡಿಸಿತು. ಆದರೆ ಅವರ ಸಹಪಾಠಿಗಳು ಹೆಚ್ಚಿಗೆ ಲ್ಯಾಂಡ್‌ಸ್ಕೇಪ್ಸ್ ರಚಿಸುತ್ತಿದ್ದರು. ಆಗ ರಾಮುರವರು ''ನಾನೂ ಏಕೆ ಕೈ ಹಾಕಬಾರದು'' ಎಂಬ ಯೋಚನೆ ಬಂದು, ಪ್ರಕೃತಿ ಚಿತ್ರ ರಚನೆಗೆ ಕೈ ಹಚ್ಚಿದಾಗ, ಪ್ರಕೃತಿ ಚಿತ್ರ ರಚನೆಯಲ್ಲಿ ಪ್ರವೀಣರಾಗಿದ್ದ ಟಂಕಸಾಲೆಯವರು ''ನೀನು ಭಾವಚಿತ್ರವನ್ನೇ ಸಾಧಿಸು, ನಿನಗೆ ಅದು ಸಿದ್ಧಿಸುತ್ತದೆ. ಭಾವಚಿತ್ರರಚನೆಯಲ್ಲಿ ಪಳಗಿದರೆ ಇತರ ಚಿತ್ರರಚನೆ ಸುಲಭ ಸಾಧ್ಯ'' ಎಂದು ಹಿತೋಕ್ತಿ ನೀಡಿದರು.

ಕಲಾಶಾಲೆಯ ಸೂಪರಿಂಟೆಂಡೆಂಟ್ ಹಾಗೂ ಚಿತ್ರಕಲಾವಿದರಾದ ಎನ್.ಜಿ. ಪಾವಂಜೆ ಮತ್ತು ಚಿತ್ರ ಶಿಲ್ಪಕಲೆಗಳಲ್ಲಿ ಎಸ್. ನಂಜುಂಡ ಸ್ವಾಮಿಗಳು ಆಗಾಗ್ಗೆ ಬಂದು ಚಿತ್ರರಚನೆಗೆ ಉತ್ಕೃಷ್ಟ ಸಲಹೆಗಳನ್ನು

ನೀಡುತ್ತಿದ್ದರು. ಇವರೆಲ್ಲರಿಂದ ದೊರೆತ ಶಿಕ್ಷಣ ರಾಮುರವರನ್ನು ಉತ್ತಮ ಕಲಾವಿದನನ್ನಾಗಿಸಲು ನೆರವಾಯಿತು.

ರಾಮುರವರ ಸನ್ಮಿತ್ರರಾದ ಡಾ. ಸಂಪತ್‌ಕುಮಾರಾಚಾರ್ಯರವರು ಲೈಬ್ರರಿಯಿಂದ ಪುಸ್ತಕಗಳನ್ನು ತಂದು, ಅವರೇ ಓದಿ ಅರ್ಥ ವಿವರಣೆ ನೀಡುತ್ತಿದ್ದರು. ಸ್ಟೆಲ್ಲಾ ಕ್ರಾಮಿಷ್‌ರವರ ಇಂಡಿಯನ್ ಕಲ್ಚರ್, ಬಿ. ವೆಂಕೋಬರಾಯರ ಮೈಸೂರು ವಾಸ್ತುಶಿಲ್ಪ, ಪರ್ಸಿ ಬ್ರೌನ್‌ರವರ ಇಂಡಿಯನ್ ಪೇಯಿಂಟಿಂಗ್, ಇ.ಬಿ. ಹ್ಯಾವಲ್‌ರವರ ಐಡಿಯಲ್ಸ್ ಆಫ್ ಇಂಡಿಯನ್ ಆರ್ಟ್, ಸಿ. ಶಿವರಾಮಮೂರ್ತಿಯವರ ಸೌತ್ ಇಂಡಿಯನ್ ಪೇಯಿಟಿಂಗ್, ಚಾಲುಕ್ಯ ಸೋಮೇಶ್ವರರ ಮಾನಸೋಲ್ಲಾಸ, ಡಾ. ಎಸ್. ಶ್ರೀಕಂಠಶಾಸ್ತ್ರಿಗಳ ಭಾರತೀಯ ಸಂಸ್ಕೃತಿ ಮೊದಲಾದ, ಕಲೆ ಮತ್ತು ಸಂಸ್ಕೃತಿಗಳ ಬಗ್ಗೆ ಅಪಾರ ಜ್ಞಾನ ಭಂಡಾರವಾಗಿರುವ ಈ ಪುಸ್ತಕಗಳಿಂದ ರಾಮುರವರು ಕಲೆ ಮತ್ತು ಕಲಾ ಇತಿಹಾಸದ ಪರಿಚಯ ಸಾಕಷ್ಟು ಮಾಡಿಕೊಂಡರು. ಇತಿಹಾಸ ಮತ್ತು ಪೌರಾಣಿಕ ವಸ್ತುವುಳ್ಳ ಚಿತ್ರಗಳನ್ನು ರಚಿಸುವಾಗ ಈ ಜ್ಞಾನ ಸಂಪತ್ತು ಅವರಿಗೆ ನೆರವಾಯಿತು.

ದಿನನಿತ್ಯದ ತೊಡರುಗಳ ಮಧ್ಯದಲ್ಲಿ ಕಲಾ ವ್ಯಾಸಂಗ ಮುಂದುವರೆಯುತ್ತಿದ್ದಂತೆ ರಾಮುರವರ ಹಳೆಯ ಗೀಳುಗಳಾದ ಸಂಗೀತ, ನಾಟಕಗಳ ಚಪಲ ಆ ಕಡೆ ಮತ್ತೆ ಎಳೆಯಿತು. ಆಗಿನ ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ ಗುಬ್ಬಿ ಕಂಪನಿ, ಶಿರಹಟ್ಟಿ ನಾಟಕ ಮಂಡಲಿ ಮೊದಲಾದ ವೃತ್ತಿಪರ ನಾಟಕ ಕಂಪನಿಗಳು ಆಡುತ್ತಿದ್ದ ಅನೇಕ ನಾಟಕಗಳನ್ನು ಪದೇ ಪದೇ ನೋಡಿ, ಆ ನಾಟಕಗಳ ಮಟ್ಟು(ಹಾಡು)ಗಳನ್ನು ಬಾಯಿ ಪಾಠ ಮಾಡಿಕೊಂಡು ಹಾಡುತ್ತಿದ್ದರು. ಉತ್ತರಾದಿ ನಾಟಕದ ಶೈಲಿ ಮತ್ತು ಮರಾಠಿ ಬಾನಿ ಶೈಲಿಗಳು ರೂಢಿಯಾಗಿದವು.

ಸಂಗೀತ ಗುರುಗಳಾದ ಎಂ.ವಿ. ಮಾದಪ್ಪನವರ ಬಳಿ ದಕ್ಷಿಣಾದಿ ಸಂಗೀತ ಕಲಿಯ ಬಯಸಿದ ಸಂದರ್ಭದಲ್ಲಿ ಗುರುಗಳ ಶಿಷ್ಯೆಯೊಬ್ಬರು ರಾಮುರವರ ಕಷ್ಟ ಕಾರ್ಪಣ್ಯಗಳನ್ನು ಗುರುಗಳಿಂದ ತಿಳಿದು ಅವರಿಗೆ ನೆರವಾದರು. ಊಟೋಪಚಾರದ ವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತರು. ಅಂತೆಯೇ ಗುರುಗಳ ಮನೆಯಲ್ಲಿ ಸಹ ಇದೇ ಅನುಕೂಲ ಲಭಿಸಿತು. ಹೀಗಾಗಿ ದಿನನಿತ್ಯದ ಬವಣೆ ತಪ್ಪಿತು.

ಮೈಸೂರಿನ ಚಾಮುಂಡೇಶ್ವರಿ ನಾಟಕ ಮಂಡಲಿ, ಕಾರಣಾಂತರದಿಂದ ತಟಸ್ಥಗೊಂಡು ಇದೇ ಮಂಡಲಿಯ ನಟರು, ಮಾದಪ್ಪ ಮತ್ತು ಇವರ ಸಹೋದರರಾದ ಶಿವನಪ್ಪ (ಎಂ.ವಿ. ಶಿವಪ್ಪ) ಮುಂದಾಳತ್ವದಲ್ಲಿ ಬಸವರಾಜು ಸಹೋದರರು ಮತ್ತು ಸುಬ್ಬಯ್ಯ ನಾಯ್ಡು ಅವರುಗಳನ್ನೊಳಗೊಂಡ ''ಸರಸ್ವತಿ ಪ್ರಸಾದ ನಾಟಕ ಮಂಡಲಿ'' ಎಂಬ ಸಂಸ್ಥೆ ಸ್ಥಾಪಿಸಿ ನಾಟಕಗಳನ್ನು ಅಭ್ಯಾಸ ಮಾಡತೊಡಗಿದರು. ರಾಮುರವರು ಇದೇ ನಾಟಕದ ಗುಂಪಿಗೆ ಸೇರಿದರು. ಶಿವಪ್ಪನವರು, ಬಸವರಾಜು ಮತ್ತಿತರ ಪ್ರಖ್ಯಾತ ನಟರ ಸಖ್ಯದಿಂದ ಮತ್ತು ಅಭ್ಯಾಸದ ಪರಿಶ್ರಮದಿಂದ ರಾಮುರವರು ನಟರಾಗಿ ರೂಪುಗೊಂಡರು. ಮಾತೃಭಕ್ತಿ, ದಾನಶೂರ ಕರ್ಣ, ವೀರ ಅಭಿಮನ್ಯು, ಮಹಾಭಾರತದ ವಸ್ತುವುಳ್ಳ ಇತರ ಕೆಲವು ನಾಟಕಗಳಲ್ಲಿ ಪಾತ್ರ ವಹಿಸಿದ್ದರು. ಇದೇ ನಾಟಕಗಳನ್ನು ಮೈಸೂರು ಆಕಾಶವಾಣಿ ಪ್ರಸಾರ ಮಾಡುತ್ತಿದ್ದಾಗ ಅವುಗಳಲ್ಲಿ ಭಾಗವಹಿಸಿ ಇನ್ನೂ ಹೆಚ್ಚಿನ ಮನ್ನಣೆ ಪಡೆದರು.

ಶಾಲಾ ವ್ಯಾಸಂಗ ಮುಗಿದ ನಂತರ

ಚಾಮರಾಜೇಂದ್ರ ವೃತ್ತಿ ಶಿಕ್ಷಣ ಕಲಾಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕಲಿಕೆಯೊಡನೆ ಗಳಿಕೆ (Earn while you

learn) ಎಂಬಂತೆ ರಾಮುರವರು ಸೈನ್ ಬೋರ್ಡ್ ಮತ್ತಿತರ ವಾಣಿಜ್ಯ ಕಲೆಗಳಲ್ಲಿ ನಿರತರಾಗಿ ಜೀವನ ಮತ್ತು ವ್ಯಾಸಂಗಕ್ಕೆ ಸಾಕಾಗುವಷ್ಟು ಹಣ ಸಂಪಾದಿಸುತ್ತಿದ್ದರೆಂದು ಈ ಹಿಂದೆಯೇ ತಿಳಿಸಲಾಗಿದೆ. ಕಲಾಶಾಲೆಯ ಐದು ವರ್ಷಗಳ ಶಿಕ್ಷಣ ಪೂರ್ಣಗೊಂಡ ನಂತರ ಯಾವ ನೌಕರಿಗೂ ಸೇರಲು ಇಚ್ಛಿಸಲಿಲ್ಲ. ಸ್ವತಂತ್ರ ಮನೋಭಾವ ಹೊಂದಿದ್ದು, ಸ್ವಂತ ವೃತ್ತಿಯಿಂದ ಸಾಕಷ್ಟು ಸಂಪಾದನೆ ಮಾಡುವ ನಂಬಿಕೆಯಿದ್ದುದರಿಂದ ಸ್ವಂತ ಸ್ಟುಡಿಯೋ ಆರಂಭಿಸಿದರು. ಲಲಿತ ಆರ್ಟ್ಸ್ ಎಂಬ ಹೆಸರಿನಿಂದ ಆರಂಭವಾಗಿ ನಂತರ ಮೈಸೂರು ಆರ್ಟ್ಸ್ ಎಂದು ಪರಿವರ್ತನೆಗೊಂಡು, ಕಡೆಯದಾಗಿ ರಾಮು ಸ್ಟುಡಿಯೋ ಎಂಬ ಹೆಸರಿನಲ್ಲಿ ಅದು ನಿಂತಿತು. ರಾಮು ಸ್ಟುಡಿಯೋ ಮೈಸೂರಿನ ಕಲಾಗಂಗೋತ್ರಿ ಎನಿಸಿಕೊಂಡಿತು. ಚಿತ್ರ, ಸಂಗೀತ ಮತ್ತು ನಾಟಕ ಕಲೆಗಳ ಅಭಿರುಚಿಯುಳ್ಳವರೆಲ್ಲರೂ ಸೇರುವ ಕೇಂದ್ರಬಿಂದುವಾಯಿತು. ರಾಮುರವರು ತಮ್ಮ ಕಲಾಜೀವನದಲ್ಲಿ ಅನೇಕ ಸಾಹಿತಿಗಳನ್ನು ಸಹ ಪರಿಚಯ ಮಾಡಿಕೊಂಡರು. ಸಾಹಿತ್ಯ ಸಾರ್ವಭೌಮ ಅ.ನ. ಕೃಷ್ಣರಾವ್, ಮ.ನ. ಮೂರ್ತಿ, ಸುಪ್ರಸಿದ್ಧ ಕಾದಂಬರಿಕಾರ ತ.ರಾ. ಸುಬ್ಬರಾವ್ ಇವರ ಪರಮ ಮಿತ್ರರಾಗಿದ್ದಲ್ಲದೆ ದಾರಿದೀಪಗಳಾಗಿ ಚಿತ್ರರಚನೆಯಲ್ಲಿ ಅನೇಕ ಉತ್ತಮ ಸಲಹೆಗಳನ್ನು ನೀಡಿ ಉತ್ತೇಜಿಸುತ್ತಿದ್ದರು. ತ.ರಾ.ಸು.ರವರು ಆಗಾಗ್ಗೆ ರಾಮುರವರನ್ನು ಭೇಟಿಯಾಗುತ್ತಿದ್ದರು. ತಮ್ಮ ಜೀವನ ಮತ್ತು ರಾಮುರವರ ಜೀವನದ ಘಟನೆಗಳನ್ನು ಆಧರಿಸಿ ''ನಾಗರಹಾವು'' ಕಾದಂಬರಿಯನ್ನು ತ.ರಾ.ಸು. ರಚಿಸಿದರು. ವಿದ್ವಾಂಸರಾದ ಡಾ.ಎಸ್. ಶ್ರೀಕಂಠ ಶಾಸ್ತ್ರಿಗಳು ಇತಿಹಾಸಕ್ಕೆ ಸಂಬಂಧಿಸಿದಂತೆ ಆಯಾ ಕಾಲ, ಸನ್ನಿವೇಶಗಳನ್ನು ಹೃದಯಂಗಮವಾಗಿ ವಿವರಿಸಿ ಐತಿಹಾಸಿಕ ಚಿತ್ರಗಳಲ್ಲಿ ನೈಜತೆ ಕಾಣಿಸಿಕೊಳ್ಳಲು ರಾಮುರವರಿಗೆ ಸಹಾಯಕರಾಗಿದ್ದರು.

ಸಾಮಾನ್ಯವಾಗಿ ರಾಮುರವರು ವಾಣಿಜ್ಯ ಕಲೆಗೆ ಕೈ ಹಾಕುತ್ತಿರಲಿಲ್ಲ. ಆದರೂ ಸಹ ಮಿತ್ರರಾದ, ಮಹಾನ್ ಸಾಹಿತಿ ಅ.ನ.ಕೃ, ತಮ್ಮ ಶ್ರೇಷ್ಠ ಕೃತಿ ''ನಟ ಸಾರ್ವಭೌಮ'' ಕಾದಂಬರಿಯ ಮುಖ ಪುಟ ಚಿತ್ರ ರಚಿಸಿಕೊಡಿರೆಂದು ಕೇಳಿದಾಗ ಅವರ ಸೂಚನೆಯಂತೆ ಮುಖ ಚಿತ್ರವನ್ನು ರಚಿಸಿ ಕೊಟ್ಟರು. ಇದೇ ರೀತಿ ಇನ್ನೊಬ್ಬ ಮಿತ್ರರಾದ ತ.ರಾ.ಸು. ರವರ ಒತ್ತಡದಿಂದ ಅವರ ಕೊನೆಯ ಕೃತಿ ದುರ್ಗಾಸ್ತಮಾನ ಕಾದಂಬರಿಯ ಮುಖಪುಟಕ್ಕಾಗಿ ಕೊನೆಯ ಮದಕರಿ ನಾಯ್ಕ ಅಶ್ವಾರೂಢರಾಗಿ ಬರುತ್ತಿರುವ ಚಿತ್ರವನ್ನು ರಚಿಸಿದರು. ಈ ಚಿತ್ರ ರಚಿತವಾಗುವುದಕ್ಕೆ ಮುಂಚಿತವಾಗಿ ರಾಮುರವರೊಡನೆ ಗಂಟೆಗಟ್ಟಲೇ ಕಾಲ ಕಳೆದು ಚಿತ್ರ ಹೇಗಿರಬೇಕೆಂಬ ತಮ್ಮ ಕಲ್ಪನೆಯನ್ನು ಭಾವಪರವಶವಾಗಿ ವಿವರಿಸುತ್ತಿದ್ದರು. ಇಂತಹ ಒಂದು ಸಂದರ್ಭದಲ್ಲಿ ತ.ರಾ.ಸು.ರವರ ಬಾಯಿಂದ ಹೊರಟ ಜಾನಪದ ಲಾವಣಿ ''ಕಲ್ಲ ಹತ್ತಿ ಕಲ್ಲನಿಳಿದು, ಕಣಿವೆ ಬಾಗಿಲ ದಾಟಿ, ಹಾಲೂ ಅನ್ನದ ಬುತ್ತಿ ಕೈಯಲ್ಲಿ ಚಿನ್ನದ ಕತ್ತಿ ಎಲ್ಲಿರುವುದೊ ಸರ್ಜಪ್ಪ ಠೀವಿಯ ಘನ ಪಾಳೇಗಾರ.'' ತ.ರಾ.ಸು.ರವರ ಕಲ್ಪನೆಯನ್ನು ಮನನ ಮಾಡಿಕೊಂಡ ರಾಮುರವರು, ಕೊನೆಯ ಮದಕರಿನಾಯ್ಕ ಅಶ್ವಾರೂಢನಾಗಿ ಕೈಯಲ್ಲಿ ಕತ್ತಿ ಹಿಡಿದು ಮುನ್ನುಗ್ಗುತ್ತಿರುವ, ಮತ್ತು ಹಿನ್ನೆಲೆಯಲ್ಲಿ ದುರ್ಗದ ರಂಗಯ್ಯನ ಬಾಗಿಲು, ಕೋಟೆ ಕೊತ್ತಲ, ಬಂಡೆ (ಕಲ್ಲಹತ್ತಿ ಕಲ್ಲನಿಳಿದು) ಚಿತ್ರಿಸಿರುವ ತೈಲ ಚಿತ್ರವನ್ನು ರಚಿಸಿ ತ.ರಾ.ಸು.ರವರ ಮೆಚ್ಚುಗೆ ಪಡೆದರು. ಸುಮಾರು ಮೂರು ಅಡಿಗಳ ಈ ತೈಲ ಚಿತ್ರ ತ.ರಾ.ಸು. ರವರ ಮನೆಯಲ್ಲಿ ಶೋಭಿಸುತ್ತಿದೆ. ಆದರೆ ಈ ಚಿತ್ರ ಯಾವ ಉದ್ದೇಶಕ್ಕಾಗಿ ರಚಿತವಾಯಿತೋ ಆ ಉದ್ದೇಶ ಸಾಧನೆಯಾಗಲಿಲ್ಲ.

ಕಾದಂಬರಿಯ ಪ್ರಕಾಶಕ ಪ್ರಾಯಶಃ ಮುದ್ರಣ ವೆಚ್ಚ ಹೆಚ್ಚಾಗುವುದೆಂ
ಕಾರಣದಿಂದ ಈ ಚಿತ್ರವನ್ನು ಮುಖಪುಟಕ್ಕೆ ಬಳಸಿಕೊಳ್ಳಲಿಲ್ಲ.

ಆರಂಭದ ದಿನಗಳಲ್ಲಿ ರಾಮುರವರು ಮಹಾಭಾರತವನ್ನೋ ಅದರಲ್ಲಿನ ದ್ವಾಪರಾಂತ್ಯದ ಕೃಷ್ಣಾವತಾರದ ಶ್ರೀ ಕೃಷ್ಣನ ಅಂತ್ಯ ಚಿತ್ರವನ್ನು ಸಂಯೋಜಿಸಿ, ತಮ್ಮ ಗುರು ಸುಬ್ರಮಣ್ಯರಾಜುರವ ಮುಂದಿಟ್ಟರು. ಆಗ ಸುಬ್ರಮಣ್ಯರಾಜುರವರು ವಿಮರ್ಶಾತ್ಮಕವಾ ಒಂದು ಮಾತು ಹೇಳಿದರು. ''ರಾಮು ನಿನಗಿನ್ನೂ ಚಿಕ್ಕ ವಯಸ್ಸು ಆರಂಭದಲ್ಲಿ ಶುಭಸೂಚಕ ವಿಷಯಗಳನ್ನುಳ್ಳ ಚಿತ್ರಗಳನ್ನು ಮಾ ರಚಿಸು. ನಿನಗೆ ವಯಸ್ಸಾದಾಗ ನೀನು ಈಗ ಆಯ್ಕೆ ಮಾಡಿಕೊಂಡಿರು ವಂತಹ ವಿಷಯಗಳನ್ನು ನಿನ್ನ ಅಂತ್ಯಕಾಲದಲ್ಲಿ ಸಂಯೋಜಿಸು'' ಆಗಲೇ ಮಹಾಭಾರತದಲ್ಲಿನ ಸನ್ನಿವೇಶ ಕೃಷ್ಣಸಂಧಾನ ವಿದುರಾತಿಥ್ಯವನ್ನು ತೈಲ ವರ್ಣದಲ್ಲಿ ಚಿತ್ರಿಸಿದರು. ಈ ಚಿತ್ರ ಸೊಗಸಾ ಮೂಡಿ ಬಂದಿತು. ಬಹು ಜನರ ಮನ್ನಣೆ ಪಡೆದ ಈ ಚಿತ್ರವನ್ನು ಭರತಪುರದ ಮಹಾರಾಜರು ಕೊಂಡು ತಮ್ಮ ಅರಮನೆಯಲ್ಲಿ ತೂಗ ಹಾಕಿದರು.

ಭಾವಚಿತ್ರ ಮತ್ತು ಸಂಯೋಜನೆಗಳು

ಭಾವಚಿತ್ರ ಮತ್ತು ಸಂಯೋಜನಾ ಚಿತ್ರ ರಚನೆ ಭಾರತೀಯ ಕಲಾವಿದರಿಗೆ ಹೊಸತೇನಲ್ಲ. ಈ ಕಲೆಗೆ ಒಂದು ಪರಂಪರೆಯಿದೆ. ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಈ ಬಗ್ಗೆ ಉಲ್ಲೇಖಗಳಿವೆ. ಉದಾಹರಣೆಗ ಕವಿಕಾಳಿದಾಸನ ''ಅಭಿಜ್ಞಾನ ಶಾಕುಂತಲ'' ಮತ್ತು ''ಮೇಘ ಸಂದೇಶ''ಗಳಲ್ಲಿ ಭಾವಚಿತ್ರ ಮತ್ತು ಸಂಯೋಜನಾ ಚಿತ್ರಗಳ ಉಲ್ಲೇಖವಿದೆ.

ಭಾವಚಿತ್ರ ಮತ್ತು ಸಂಯೋಜನಾ ಚಿತ್ರಗಳ ರಚನೆಯಲ್ಲಿ ರಾಮುರವರು ನಿಷ್ಣಾತರು. ಭಾವಚಿತ್ರವೆಂದರೆ ವ್ಯಕ್ತಿಯ ರೂಪ ಚಿತ್ರಣ. ಇಷ್ಟೇ ಅಲ್ಲದೆ ರೂಪದರ್ಶಿಯ ವ್ಯಕ್ತಿತ್ವ, ಹಾವಭಾವ, ಮನೋಗತವನ್ನು ಚಿತ್ರಿಸಬೇಕು. ಇಂತಹ ಚಿತ್ರ ರಚಿಸಿಲು ಕಲಾವಿದನಿಗೆ ಕಲೆಗಾರಿಕೆ, ಕುಂಚ ಕೌಶಲ್ಯವಿರಬೇಕು. ವ್ಯಕ್ತಿ ಚಿತ್ರಣದಲ್ಲಿ ನಿಖರತೆ ಇರಬೇಕು. ಪ್ರಕೃತಿ ಚಿತ್ರಣದಲ್ಲಿ ಒಂದು ಮರದ ಅಥವಾ ಬೆಟ್ಟದ ಎತ್ತರವನ್ನು ಸಂದರ್ಭೋಚಿತವಾಗಿ ಹಿಗ್ಗಿಸಬಹುದು, ಕುಗ್ಗಿಸಬಹುದು. ಸಂಯೋಜನೆಯ ಅಗತ್ಯಗಳಿಗೆ ಅನುಗುಣವಾಗಿ ದೃಶ್ಯದ ಕೆಲವು ಭಾಗಗಳನ್ನು ಚಿತ್ರಿಸದೆ ಬಿಡಬಹುದು ಅಥವಾ ಇಲ್ಲದ್ದನ್ನು ಸೇರಿಸಬಹುದು. ಆದರೆ ತದ್ರೂಪದ ಭಾವಚಿತ್ರದ ರಚನೆಯಲ್ಲಿ ಬದಲಾವಣೆಗಳಿಗೆ ಅವಕಾಶ ಇಲ್ಲ. ಪ್ರಮಾಣಬದ್ಧತೆ ಹಾಗೂ ನಿಖರತೆಗಳ ಕಟ್ಟುಪಾಡು ಬಹಳವಿರುವುದಿಂದ ಭಾವಚಿತ್ರ ರಚನಾ ಕಲಾವಿದನ ಕರ ಕೌಶಲ್ಯ ಉತ್ಕೃಷ್ಟವಾಗಿರಬೇಕು. ಛಾಯಾ ಚಿತ್ರಗ್ರಹಣ ಬಂದ ನಂತರ ಕಲಾವಿದರರಚಿತ ಭಾವಚಿತ್ರಗಳ ಬೇಡಿಕೆ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು. ನಂತರ ವರ್ಣಮಯ ಛಾಯಾಚಿತ್ರಗಳು ಬಂದ ನಂತರ ಬೇಡಿಕೆ ಇನ್ನೂ ಕಡಿಮೆಯಾಯಿತು. ಆದರೂ ಛಾಯಾಚಿತ್ರಗಳಿಗೆ ಕೆಲವು ಇತಿ ಮಿತಿಗಳಿರುವುದರಿಂದ ಉತ್ತಮ ಕಲಾವಿದರ ಭಾವಚಿತ್ರಗಳಿಗೆ ಬೇಡಿಕೆಯಿದೆ. ಕೆಲವು ಸೀಮಿತ ವರ್ಗಗಳ ಬೇಡಿಕೆಯಿಂದ ಈ ಚಿತ್ರಣ ಕಲೆ ಜೀವಂತವಾಗಿ ಉಳಿಯಿತು. ಕ್ಷಣಮಾತ್ರದಲ್ಲಿ ಸೆರೆಹಿಡಿಯಲ್ಪಟ್ಟ ರೂಪದರ್ಶಿಯ ಛಾಯಾಚಿತ್ರದಲ್ಲಿ ಮನೋಗತವನ್ನು ಮತ್ತು ವ್ಯಕ್ತಿತ್ವವನ್ನು ಪೂರ್ತಿಯಾಗಿ ಕಾಣಿಸಲು ಸಾಧ್ಯವಿಲ್ಲ. ಆದರೆ ಒಬ್ಬ ಕಲಾವಿದ ಆಳೆತ್ತರದ ಪೂರ್ಣ ಮಾನವಾಕೃತಿಯನ್ನು ತೈಲವರ್ಣದಲ್ಲಿ ರಚಿಸಿದಲ್ಲಿ ನೂರಾರು ವರ್ಷಗಳು ಶಾಶ್ವತವಾಗಿ ಉಳಿಯುತ್ತದೆ.

ಮೂಲ ವರ್ಣಗಳ ಬದಲಾವಣೆ ತೀರ ಅಲ್ಪ. ಸಾರ್ವಜನಿಕವಾಗಿ, ಶಾಶ್ವತವಾಗಿ ಪ್ರದರ್ಶಿಸಬೇಕಾರುವ ಗಣ್ಯವಕ್ತಿಗಳ ಭಾವಚಿತ್ರಗಳು ಕಲಾವಿದರಿಂದ ರಚಿಸಲ್ಪಟ್ಟ ತೈಲ ವರ್ಣ ಕೃತಿಗಳಾಗಿರುತ್ತವೆ.

ನಮ್ಮ ಇತಿಹಾಸ, ಪುರಾಣ ಅಥವಾ ಕಾವ್ಯಗಳ ಸಂದರ್ಭ ಸನ್ನಿವೇಶಗಳನ್ನು ಪ್ರೇಕ್ಷಕನ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ ಕಲಾತ್ಮಕವಾಗಿ ಸಂಯೋಜಿಸಿರುವ ಚಿತ್ರಗಳನ್ನು ಸಂಯೋಜನಾ ಚಿತ್ರಗಳ ಗುಂಪಿಗೆ ಸೇರಿಸಬಹುದು. ಕಲಾವಿದನಾದವನು ಒಂದೊಂದು ಪ್ರಸಂಗವನ್ನು ಆಳವಾಗಿ ಅಧ್ಯಯನ ಮಾಡಿ, ಸನ್ನಿವೇಶದ ಬಗ್ಗೆ ಆಲೋಚಿಸಿ, ಅಲ್ಲಿ ಬರುವ ವ್ಯಕ್ತಿಗಳ ಗುಣ, ಮನೋಧರ್ಮ ಮತ್ತು ಪರಿಸರವನ್ನು ನಿಷ್ಠೆಯಿಂದ ಚಿತ್ರಿಸಬೇಕು. ಕಲಾವಿದನ ಕಲ್ಪನಾ ಶಕ್ತಿ ಅದ್ಭುತವಾಗಿರಬೇಕು. ಈ ಕಾಲ್ಪನಿಕ ದೃಶ್ಯವನ್ನು ಹಿತಮಿತ ಸೂಕ್ತ ವರ್ಣಗಳ ಬಳಕೆಯಿಂದ ಮೇಲ್ಮೈ ಮೇಲೆ ಸಮರ್ಥವಾಗಿ ಚಿತ್ರಿಸುವ ಕೌಶಲ್ಯವೂ ಕಲಾವಿದನಿಗೆ ಅಗತ್ಯ. ಈ ಸಾಮರ್ಥ್ಯವಿರುವ ಕಲಾವಿದನಿಂದ ರಚಿತವಾಗಿರುವ ಚಿತ್ರಗಳು ಅಪೂರ್ವ ಕೃತಿಗಳಾಗಿ ಜನಮನ್ನಣೆ ಪಡೆಯುವ ಸಾಧ್ಯತೆಯಿದೆ.

ಮೇಲ್ಕಾಣಿಸಿದ ನಿಟ್ಟಿನಲ್ಲಿ ರಾಮುರವರು, ಭಾವಚಿತ್ರ ಹಾಗೂ ಸಂಯೋಜನಾ ಚಿತ್ರರಚನೆ ಕರಗತ ಮಾಡಿಕೊಂಡು ಅಸಂಖ್ಯಾತ ಕಲಾಕೃತಿಗಳನ್ನು ರಚಿಸಿ ಸಾರ್ವತ್ರಿಕ ಮೆಚ್ಚುಗೆ ಪಡೆದಿದ್ದಾರೆ. ರಾಮುರವರ ಕಲಾಕೃತಿಗಳು, ಕರ್ನಾಟಕದಾದ್ಯಂತ ಅರಮನೆ ಗುರುಮನೆಗಳಲ್ಲಿ, ದೇಶಾದ್ಯಂತ ಮತ್ತು ವಿಶ್ವದ ಅನೇಕ ಭಾಗಗಳಲ್ಲಿ ರಾರಾಜಿಸುತ್ತಿವೆ. ಮೈಸೂರಿನ ಜೆ.ಎಸ್.ಎಸ್. ಮಠ, ಶ್ರೀ ಸಿದ್ದಗಂಗಾ ಮಠ, ಮುರುಗಿ

ಮಠಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಖಾಸಗಿ ಸಂಸ್ಥೆ ಹಾಗೂ ವ್ಯಕ್ತಿಗಳು ರಾಮುರವರಿಗೆ ಪ್ರೋತ್ಸಾಹ ನೀಡಿದ್ದಾರೆ. ಕರ್ನಾಟಕ ರಾಜಧಾನಿ ಬೆಂಗಳೂರಿನ ವಿಧಾನ ಸೌಧದಲ್ಲಿ ಪ್ರದರ್ಶಿಸಲು ಗಾಂಧೀಜಿ, ನೆಹ್ರೂಜಿ, ಡಾ.ಅಂಬೇಡ್ಕರ್, ಕೆಂಗಲ್ ಹನುಮಂತಯ್ಯ ಇವರುಗಳ ಪೂರ್ಣಾಕೃತಿಯ ತೈಲ ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಹಿಂದಿನ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರನ್ನು ಎದುರಿಗೆ ಕೂರಿಸಿಕೊಂಡು ಅವರ ಭಾವಚಿತ್ರವನ್ನು ಅಮೋಘವಾಗಿ ರಚಿಸಿದ್ದಾರೆ. ಈ ಚಿತ್ರ ದೆಹಲಿ ರಾಷ್ಟ್ರಪತಿ ಭವನದಲ್ಲಿದೆ. ಬೆಂಗಳೂರು ನಗರಸಭೆ ಕಛೇರಿ ಮತ್ತು ಮೇಯೊ ಹಾಲ್‌ಗಳಲ್ಲಿರುವ ಬೆಂಗಳೂರು ನಗರ ನಿರ್ಮಾಪಕ ಕೆಂಪೇಗೌಡ ಪೂರ್ಣಾಕೃತಿಯ ಚಿತ್ರಗಳು ರಾಮುರವರು ನಿರ್ಮಿಸಿದ್ದು.

ದೆಹಲಿಯ ರಾಷ್ಟ್ರಪತಿ ಭವನಕ್ಕಾಗಿ, ಭಾರತದ ಕಡೆಯ ವೈಸ್‌ರಾಯ್ ಆಗಿದ್ದ ಲಾರ್ಡ್ ಮೌಂಟ್‌ಬ್ಯಾಟನ್ ಮತ್ತು ಆತನ ಪತ್ನಿ ಎಡ್ವಿನ್ ಮಹಾತ್ಮಗಾಂಧೀಜಿ ಅವರೊಡನೆ ನಿಂತಿರುವ ಪೂರ್ಣಾಕೃತಿಯ ಚಿತ್ರ ರಚಿಸಿಕೊಟ್ಟಿದ್ದಾರೆ. ಮೈಸೂರು ಅರಮನೆಯ ಉತ್ತರದ ದಿಡ್ಡೀ ಬಾಗಿಲುಗಳಲ್ಲಿ ಭಿತ್ತಿ ಫ್ರೆಸ್ಕೋ ಮಾದರಿ 12-15 ಅಡಿ ವಿಸ್ತೀರ್ಣದ ನಾಲ್ಕು ಪ್ರಕೃತಿ ಚಿತ್ರಗಳನ್ನು ರಚಿಸಿದ್ದಾರೆ. ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಖಾಸಗಿ ಪೂಜಾ ಮಂದಿರವನ್ನು ಬೆಳಗಿಸಲು ಧರ್ಮಗುರುಗಳು, ಸಾಧು ಸಂತರು, ದಾಸವರೇಣ್ಯರು, ಶ್ರೀ ಮಧ್ವಾಚಾರ್ಯರು, ಶ್ರೀ ಆದಿ ಶಂಕರಾಚಾರ್ಯರು, ಶ್ರೀ ರಾಘವೇಂದ್ರ ಸ್ವಾಮಿಗಳು, ಶ್ರೀ ಕನಕ, ಶ್ರೀ ಪುರಂದರದಾಸರು ಮೊದಲಾದವರ ಇಪ್ಪತ್ತು ಕೃತಿಗಳನ್ನು ಮಹಾರಾಜರ

ಇಚ್ಛಾನುಸಾರ ರಚಿಸಿ ಕೊಟ್ಟಿದ್ದಾರೆ. ಬ್ರಿಟನ್ನಿನ ರಾಣಿ ಎಲಿಜೆಬತ್, ಅಮೆರಿಕಾದ ಮಾಜಿ ಅಧ್ಯಕ್ಷ ಜಾನ್. ಎಫ್. ಕೆನಡಿ ಇವರುಗಳ ಚಿತ್ರಗಳನ್ನು ರಚಿಸಿ ಸದರಿ ಗಣ್ಯರ ಶ್ಲಾಘನೆ ಪಡೆದಿದ್ದಾರೆ.

ತಮ್ಮ ಹುಟ್ಟೂರು ಮಧುಗಿರಿಯ ವಿಸ್ತೃತ ದೃಶ್ಯದ 5-4 ಅಡಿ ಅಳತೆಯ ತೈಲವರ್ಣ ಚಿತ್ರವನ್ನು ರಚಿಸಿ, ತಮ್ಮ ಊರಿನ ಪುರಸಭೆಗೆ ನೀಡಿದರು. ಈ ಚಿತ್ರಕ್ಕೆ ಪುರಸಭೆ ಹಣ ನೀಡಲು ಬಂದಾಗ ಅದನ್ನು ನಿರಾಕರಿಸಿದರು. ಆದರೆ ಪುರಸಭೆ ತಮ್ಮೂರಿಗೆ ಗೌರವ ತಂದಿರುವ ಶ್ರೇಷ್ಠ ಕಲಾವಿದನನ್ನು ಪುರಸ್ಕರಿಸದೆ ಬಿಡಲಿಲ್ಲ. ರಾಮುರವರನ್ನು ಸನ್ಮಾನಿಸಿ ಒಂದು ಖಾಲಿ ನಿವೇಶನವನ್ನು ಉಚಿತವಾಗಿ ನೀಡಿತು.

ರಾಮುರವರ ಆರಾಧ್ಯ ಮೂರ್ತಿ ಶ್ರೀಮದ್ ರಾಘವೇಂದ್ರ ಗುರುರಾಜರ ಅವತಾರತ್ರಯ ನಿರೂಪಿಸುವ ಭಾವಚಿತ್ರವನ್ನು ಸುಮಾರು 8 ಅಡಿ ಎತ್ತರದಲ್ಲಿ ನಿರ್ಮಿಸಿ ಭಕ್ತಿ ಪೂರ್ವಕವಾಗಿ ಮಂತ್ರಾಲಯಕ್ಕೆ ಅರ್ಪಿಸಿದರು. ಈ ಚಿತ್ರವನ್ನು ಇದೀಗ ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ರಾಯರಗುಡಿಗೆ ವರ್ಗಾಯಿಸಲಾಗಿದೆ. ಮೈಸೂರಿನ ಮೊದಲ ಮುಖ್ಯಮಂತ್ರಿ ಶ್ರೀ ಕೆ. ಚೆಂಗಲರಾಯರೆಡ್ಡಿ ಮತ್ತು ಶ್ರೀ ದೇವದಾಸ್ ಗಾಂಧಿಯವರ ಇಚ್ಛಾನುಸಾರ ''ಸರ್ವೋದಯ'' ಎಂಬ ಶೀರ್ಷಿಕೆಯ ಸಂಯೋಜನಾ ಚಿತ್ರವನ್ನು ಮಹಾತ್ಮಾಜಿಯವರ ಪುಣ್ಯತಿಥಿಯ ಸಂದರ್ಭದಲ್ಲಿ ರಾಜಘಾಟ್‌ನಲ್ಲಿ ಪ್ರದರ್ಶಿಸಲು ರಚಿಸಿ ಕೊಟ್ಟರು. ಈ ಚಿತ್ರ ಅಂತರರಾಷ್ಟ್ರೀಯ ಗಮನಸೆಳೆದು ವಿಶ್ವದಾದ್ಯಂತ ಪತ್ರಿಕೆಗಳ ಪ್ರಶಂಸೆ ಪಡೆಯಿತು.

ಶ್ರೀ ಕನಕದಾಸರು, ಶ್ರೀ ಪುರಂದರ ದಾಸರು, ಕವಿಕಾಳಿದಾಸರು, ಎರಡನೇ ಚಂದ್ರಗುಪ್ತನ ಆಸ್ಥಾನದಲ್ಲಿ ರಘುವಂಶ ಕಾವ್ಯವನ್ನು

ನಿರೂಪಿಸುತ್ತಿರುವ ಚಿತ್ರಗಳು ಬೆಂಗಳೂರಿನ ಮ್ಯೂಸಿಯಂ ಮತ್ತು ಮೈಸೂರಿನ ಜಗನ್‌ಮೋಹನ ಅರಮನೆಯಲ್ಲಿ ರಾರಾಜಿಸುತ್ತಿವೆ.

ಬಸವ ಸಮಿತಿಗಾಗಿ ಜಗಜ್ಯೋತಿ ಶ್ರೀ ಬಸವೇಶ್ವರ ಮತ್ತು ಶ್ರೀ ನಿಜಗುಣಶಿವಯೋಗಿಯವರ ಚಿತ್ರಗಳನ್ನು ಮತ್ತು ಆರ್ಯನಾಯಕ ಸಂಘದವರಿಗಾಗಿ ಶ್ರೀ ವಾಲ್ಮೀಕಿ ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಸದರಿ ಸಂಸ್ಥೆಗಳವರು ಈ ಚಿತ್ರಗಳನ್ನು ಅಂದವಾಗಿ ವರ್ಣದಲ್ಲಿ ಮುದ್ರಿಸಿ ಸಹಸ್ರಾರು ಪ್ರತಿಗಳನ್ನು ಹಂಚಿದ್ದಾರೆ. ಆದರೆ ಶ್ರೀ ಬಸವೇಶ್ವರರ ಚಿತ್ರ ಮುದ್ರಿಸುವಾಗ ಚಿತ್ರದ ಕೆಳಭಾಗದಲ್ಲಿ ಚಿತ್ರದ ಕತೃ ಮಧುಗಿರಿ ರಾಮು ಎಂಬ ಸಹಿಯನ್ನು ಅಳಿಸಿ ಅದರ ಬದಲಿಗೆ ''ಬಸವ ಸಮಿತಿ'' ಎಂದು ಸೇರಿಸಿದ್ದಾರೆ. ಈ ಬಗ್ಗೆ ತಮಗೆ ಅಪಚಾರವಾಗಿದೆಯೆಂದು ರಾಮುರವರು ತೀರಾ ನೊಂದು ನುಡಿಯುತ್ತಾರೆ.

ವ್ಯಕ್ತಿತ್ವ ಮತ್ತು ಜೀವನ

ರಾಮುರವರು ಮಧ್ಯಮ ಎತ್ತರದವರಾಗಿದ್ದು, ಒಳ್ಳೆ ಮೈಕಟ್ಟು ಹೊಂದಿದ್ದಾರೆ. ಯಾವಾಗಲೂ ಅಚ್ಚುಕಟ್ಟಾಗಿ ಕ್ಲೋಸ್‌ಕಾಲರ್ ಕೋಟ್, ಷರಾಯಿ ಇಲ್ಲವೆ ಶುಭ್ರ ಕಚ್ಚೆಪಂಚೆ ಧರಿಸಿ ಅಡ್ಡಾಡುತ್ತಾರೆ. ಕಳೆ ಕಟ್ಟುವ ಮುಖವಿದೆ. ಆರಂಭದ ದಿನಗಳಲ್ಲಿ ಅಂಗಸಾಧನೆ ಮಾಡಿದುದರಿಂದ ಈ ವಯಸ್ಸಿನಲ್ಲೂ ದೇಹದಾರ್ಢ್ಯ ಉಳಿಸಿ ಕೊಂಡಿದ್ದಾರೆ. ಬಹಳ ಸರಳ ಸ್ವಭಾವದವರು. ಎಲ್ಲರೊಂದಿಗೆ ಬೆರೆಯುವ ಪ್ರವೃತ್ತಿ. ಯಾವುದೇ ಭೇದ ಭಾವ ಕಾಣದವರು. ಒಳ್ಳೆ ಮಾತುಗಾರರು, ಸದಾ ಹಸನ್ಮುಖಿಯಾಗಿ, ಸಂಭಾಷಣೆಯಲ್ಲಿ ಎಲ್ಲರೂ ನಕ್ಕು ನಲಿಯುವಂತೆ ತಮ್ಮ ಜೀವನದ ಅನೇಕ ತುಣುಕುಗಳನ್ನು ಹೇಳುತ್ತಾರೆ.

ಬಹಿರ್ಮುಖಿಯಾಗಿರುವ ಇವರಿಗೆ ಗುಟ್ಟು, ಗೋಪ್ಯ, ರಹಸ್ಯವೆಂಬುದೇ ತಿಳಿಯದು. ಬಿಚ್ಚುಮನಸ್ಸಿನಿಂದ ಮಾತನಾಡುತ್ತಾರೆ. ಆದರೆ ಯಾರ ಮನಸ್ಸಿಗೂ ನೋವುಂಟು ಮಾಡುವುದಿಲ್ಲ. ಕಲಾವಿದನಿಗೆ ಇರಬೇಕಾದ ತಾಳ್ಮೆ, ಸಹನೆ ಇವರಲ್ಲಿ ಮನೆಮಾಡಿವೆ. ಯಾರೇ ಆಗಲೀ ಯುವ ಅಥವಾ ಹಿರಿಯ ಕಲಾವಿದರು ಉತ್ತಮ ಚಿತ್ರಗಳನ್ನು ರಚಿಸಿದ್ದರೆ ಮನಃ ಪೂರ್ವಕವಾಗಿ ಮೆಚ್ಚುತ್ತಾರೆ. ಮಾತ್ಸರ್ಯವೆಂಬುದಿಲ್ಲ. ಚಿತ್ರಕಲೆಯ ಸೂಕ್ಷ್ಮ ಅಂಶಗಳನ್ನು ಕೇಳಿದ ಇತರರಿಗೂ ಹೇಳಿಕೊಡುತ್ತಾರೆ.

ರಾಮುರವನ್ನು ವಿವಾಹವಾಗು ಎಂದು ಒತ್ತಾಯಿಸುವ ಬಂಧು ಬಳಗದವರು ಯಾರು ಇರಲಿಲ್ಲ. ಹೀಗಾಗಿ ರಾಮುರವರು ಒಂಟಿಯಾಗಿ ಉಳಿದರು. ರಾಮುರವರು ಕಲೆಗಾಗಿ ತಮ್ಮನ್ನು ಅರ್ಪಿಸಿಕೊಂಡ ಬ್ರಹ್ಮಚಾರಿಗಳು. ಇವರದೊಂದು ವಿಶಿಷ್ಟ ಪ್ರಕರಣ. ರಾಮುರವರು ಕಲಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಶ್ರೀ ಮಾದಪ್ಪನವರ ಸಂಗೀತ ಶಿಷ್ಯೆಯೊಬ್ಬರು ಮತ್ತು ಅವರ ಕುಟುಂಬದವರು ರಾಮುರವರ ಊಟೋಪಚಾರಗಳ ವ್ಯವಸ್ಥೆ ಮಾಡಿ ಅವರಿಗೆ ನೆರವಾಗಿದ್ದರೆಂದು ಈ ಹಿಂದೆ ಪ್ರಸ್ತಾಪಿಸಲಾಗಿದೆ. ಕಾರಣಾಂತರದಿಂದ ಇದೇ ಕಲಾವಿದೆಯ ಕುಟುಂಬದಲ್ಲಿ ಏರುಪೇರಾಗಿ ಈಕೆಗೆ ನಿತ್ಯ ಜೀವನ ನಡೆಸುವುದೇ ದುರ್ಬರವಾಗುವ ಪರಿಸ್ಥಿತಿ ಉಂಟಾಗಲು ರಾಮು ಅವರು ಆ ಸಂಸಾರವನ್ನು ನಿರ್ವಹಿಸುವ ಹೊಣೆ ಹೊತ್ತರು.

ರಾಮುರವರು ಕಲೆಗಾಗಿ ಸಲ್ಲಿಸಿರುವ ಅಪಾರ ಸೇವೆಗಾಗಿ ಹಲವಾರು ಸಂಘ ಸಂಸ್ಥೆಗಳು ಅವರನ್ನು ಸನ್ಮಾನಿಸಿ, ಶಾಲುಗಳನ್ನು ಹೊದಿಸಿ ನೆನಪಿನ ಕಾಣಿಕೆಗಳನ್ನಿತ್ತಿದ್ದಾರೆ. ಅಸಂಖ್ಯಾತ

ಬಹುಮಾನಗಳನ್ನು, ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಸನ್ಮಾನ ಮತ್ತು ಪ್ರಶಸ್ತಿ ಪ್ರದಾನ, ಕರ್ನಾಟಕ ಲಲಿತ ಅಕಾಡಮಿಯ ಪ್ರಶಸ್ತಿ ಇವುಗಳು ಮುಖ್ಯವಾದುವು. ಇಷ್ಟೆಲ್ಲಾ ಲಭಿಸಿದರೂ, ಸಾಧಿಸಿದ್ದರೂ, ರಾಮುರವರು ಅಹಂಕಾರ ಅಹಂಭಾವಗಳಿಲ್ಲದ ನಿರ್ಗರ್ವಿ. ರಾಮುರವರನ್ನು ನೀವೇನು ಸಾಧಿಸಿದ್ದೀರಿ? ಎಂಬ ನನ್ನ ಪ್ರಶ್ನೆಗೆ ಅವರು ವಿನಯಪೂರ್ವಕವಾಗಿ ನೀಡಿದ ಉತ್ತರವಿದು ''ಕಲೆ ಮತ್ತು ಕಲಾ ಲೋಕ ಸಪ್ತಸಾಗರಗಳಷ್ಟು ವಿಶಾಲವಾದುದು. ಈ ಸಾಗರಗಳ ಒಂದು ಹನಿಯಷ್ಟು ಗಳಿಕೆ ನನ್ನದಿರಬಹುದು. ಇನ್ನೂ ಜ್ಞಾನಾರ್ಜನೆ ಬೇಕಾದಷ್ಟಿದೆ. ಜೀವನದ ಉದ್ದಕ್ಕೂ ನಾನು ವಿದ್ಯಾರ್ಥಿ.''

ತಾಲ್ಲೂಕು ಕೇಂದ್ರದಲ್ಲಿ ಕಲಾಪರಿಸರವಿಲ್ಲದ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ತಮ್ಮ ಸ್ವಂತ ಶ್ರಮ ಹಾಗೂ ಅಭಿಮಾನಿ ಪೋಷಕರ ನೆರವಿನಿಂದ ಉತ್ತಮ ಕಲಾವಿದರಾಗಿ ಮೂಡಿಬಂದ ರಾಮುರವರ ಜೀವನ ಕೆಲವು ಪಾಠಗಳನ್ನು ಕಲಿಸುತ್ತೆ. ಕಲೆ ವಂಶಪಾರಂಪರ್ಯದಿಂದ ಬಂದುದಲ್ಲ. ಇಚ್ಛೆಯಿದ್ದಲ್ಲಿ ಯಾರೂ ಕರಗತ ಮಾಡಿಕೊಳ್ಳಬಹುದು. ಇದಕ್ಕೆ ಪರಿಶ್ರಮ ಸಾಧನೆ ಅಗತ್ಯ. ಎಂತಹ ಕಷ್ಟಕಾರ್ಪಣ್ಯಗಳಿದ್ದರೂ ಧೃತಿಗೆಡದಿದ್ದಲ್ಲಿ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎನ್ನುವುದಕ್ಕೆ ರಾಮು ಅವರೊಂದು ಜೀವಂತ ಉದಾಹರಣೆ.



ದುರ್ಗಾಸ್ತಮಾನಕ್ಕಾಗಿ ಚಿತ್ರ



ಶ್ರೀ ಗಾಯತ್ರಿ




ವಿದುರಾತಿಥ್ಯ




ಶ್ರೀ ರಾಘವೇಂದ್ರಸ್ವಾಮಿಗಳು




ಶ್ರೀಮದ್ ಆದಿ ಶಂಕರಾಚಾರ್ಯರು




ಕನಕದಾಸರು



ಪುರಂದರದಾಸರು



ಚಿತ್ರ ರಚನೆಯಲ್ಲಿ ಶ್ರೀ ರಾಮುರವರು



ಮಹಾತ್ಮ ಗಾಂಧಿಯವರ ಚಿತ್ರದೊಂದಿಗೆ ರಾಮು

MADHUGIRI RAMU

Madhugiri Hanumanthappa Ramu, popularly known as Madhugiri Ramu, is an artist par excellence. His early engagement as an amateur in art forms like music, theatre, and later a deep preoccupation with fine arts are an evidence of his multi-faceted talent. His diligence, ingenuity combined with the able support of his well-wishers have played a tremendous role in earning him fame as one of the leading artists of Karnataka.

Ramu's name is synonymous with oil portraits. His long services in art have earned him innumerable prizes, awards and encomiums.

Childhood

Undeterred by the hardships during childhood and youth, Ramu strode forward with the help of his relatives, friends and well-wishers to shape a pulsating life which is a role model and a guiding force to others.

Ramu was born on 5th November 1919 which happens to be Uthana Dwadashi, an auspicious day, at Madhugiri, sixty miles away from

Bangalore. Madhugiri is one of the taluk headquarters in Tumkur district. It is also a place of historical significance, once ruled by the Nolambas. Number of hills, dense forests rich in wildlife (now almost extinct) once constituted the landscape of Madhugiri. It is said to be the biggest monolithic mountain rock (in height and width) in Asia. The town is replete with temples and holy ponds. The crowning glory is a seven-array fort. Atop the hill lies a temple without an idol that the town continues to celebrate festival which were initiated at the time of the Vijayanagar empire. Young Ramu was brought up in this environment.

Ramu was born into a family of traditional cowherds, who were engaged in agriculture. His mother was Lakshmidevamma, fondly referred to as Lakshmakka. His father Hanumanthappa passed away when the children were still young. His brother Hanumantharayappa was a tailor ; sister Hanumakka was a teacher. The mother had to shoulder the responsibility of the family after the untimely death of his father. Ramu's grandmother and mother toiled as labourers to bring him up. His brother and sister were named after the family deity Maruthi.

Education

Ramu completed his primary education at the Fort Primary School, and at Government Middle School. He finished matriculation from Government High School in 1935.

During holidays, Ramu set out to roam in gay abandon in the hills around Madhugiri. He picked fruits and berries from the forest and tasted them along with his friends. The surplus was shared with the neighbours back home. So also aromatic flowers brought from the forest were distributed in the neighbourhood . He also collected fire-wood from the forest for household use. These acts endeared him to his family and the neighbours alike. Swimming, physical exercises helped him maintain a robust body. With extraordinary courage, he used to venture into the forest fearlessly, unmindful of wild animals like tiger, cheetah, wolf, etc.

While in school, Ramu became popular with rendering invocations at social functions. Some of the art lovers residing in the same street staged "Kaviratna Kalidasa", in which Ramu did the role of the young Bhojaraja. An obsession for theatre was thus born.

In due course, he restricted himself to female roles. One such prominent role was in "Bhakta Ajamila". It would be appropriate to mention here about Sri M.S.Dasappa, the playwright, who was Ramu's teacher and a well wisher. Shri Dasappa also known as Ramadasappa (father of Sri M.S. Nanjunda Rao, founder Secretary of Karnataka Chitrakala Parishat,) was a multi-faceted personality. There was not a single art form he had not dabbled with. A teacher by profession, he spent time on music, literature, theatre, fine arts and Harikathe. It was he who initiated Ramu into arts in general and fine arts in particular. Ramu not only cultivated interest in music, theatre and fine arts since childhood, but had a direct experience with them. He enchanted the audience with his sweet voice during Ganesh Chaturthi and Rama Navami celebrations and had a good fan following. He had a large friends' circle, the darker side of which pushed him into bad company. Though he did not indulge in any mischief himself, he had to bear the brunt of reproach for the wrong doing of others. He had incurred the wrath of the local people who desired that he should move elsewhere. Sri Dasappa encouraged Ramu to go to Mysore to pursue his interests. Since Mysore was the capital

Ramu could derive royal patronage. Sri Ramaih, the drawing master at the High School concurred with Dasappa's viewpoint. At this critical moment Ramu left for Mysore in 1937 leaving his dear hometown behind.

In Pursuit Of Fine Arts

Ramu's relative Sri Siddappa, a surveyor in Mysore , was a theatre enthusiast. He readily agreed to render all aid and succour to Ramu including boarding and lodging. When Ramu expressed his desire to study fine arts, Siddappa encouraged him and got him admitted to Sri Chamarajendra Technical Institute. In turn later Ramu helped Siddappa's son Raja Shankar to become a film actor.

Ramu's mother passed away while he was still in art school. There was disruption in his boarding and lodging arrangements as Siddappa got a job transfer to another place. There was no possibility of securing any help from his friends or relatives. He was therefore compelled to earn a living, as he studied though the situation was grave, he faced it with courage and decided to live on his own. Hence, he took up commercial art and painted signboards after school hours to make a living. He

was able to save up money for his brushes and colours.

Ramu continued his studies under the tutelage of well-known masters like Sarvashri Y.Subramanya Raju, S.G. Tankasale,NL Pavanje and others at Chamarajendra Institute.

As a student Ramu had a fascination for portaits and figure compositions, while his classmates took to painting landscapes. Ramu also thought of doing landscapes. But Sri Tankasale, a master in landscapes, suggested that Ramu focus his efforts on doing portraits, which would enable him to work with dexterity in other forms of painting.

The superintendent of the art school and a perfect artist Sri N.G.Pavanje, and master sculptor Sri S.Nanjunda Swamy visited Ramu frequently while in class and gave useful tips. The fine education he got from this Institute made him a great artist.

Dr.Sampathkumaracharya, a very good friend of Ramu, brought books from the library and read them for him with interpretation. Stella Kramrish's "Indian Culture", B.Venkoba Rao's "Mysore Vastushilpa", Percy Brown's "Indian Painting", E.B.

Havel's "Ideals of Indian Art", C.Shivaramaurthy's "South Indian Painting", Chalukya Someshwara's "Manasollasa", Dr.S.Srikantashastri's "Bharatiya Samskriti" are some of the highly resourceful books on art and culture that helped Ramu acquaint himself with art and history of art which proved very useful later while working on historical and mythological themes.

As his study of art continued amidst day to day tangles, his old obsession for theatre and music began to surface once again. He would repeatedly watch plays staged by famous troupes like Gubbi Company and Shirahatti Nataka Mandali.He would learn the songs by heart. He also became conversant with north Indian and Marathi Bani styles of singing.

Ramu's desire to learn Carnatic music grew. He was able to persuade one of the most eminent music teachers of those days Sri M.V.Madappa to accept him as his student. one of the lady students of Sri Madappa learn about the hardships Ramu was undergoing. She extended a helping hand, by taking up the responsibility of his boarding needs. His teacher also came forward to help him in this regard. Thus the day to day problem of sustenance was solved.

Chamundeshwari Nataka Mandali of Mysore was closed down due to unavoidable circumstances. The actors of the Mandali including Basavaraju brothers and Subbaiah Naidu started "Saraswathi Prasada Nataka Mandali" under the leadership of Madappa and Shivanappa(M.V.Shivappa). Ramu joined this troupe and the actor in Ramu was shaped by his interaction with famous actors like Sri Shivappa ,Sri Subbaiah Naidu and others, and through rigorous rehersals. He acted in plays based on the themes from Mahabharata like Mathru Bhakti, Danashura Karna, Veera Abhimanyu etc.Apart from theatre, Ramu also participated in the plays broadcast monthly by the Mysore Akashavani.

After School Education

It has already been mentioned that Ramu followed the policy of 'earn while you learn' during his studentship at Chamarajendra Institute by taking up commercial arts. He did not want to take up a job after the completion of his five-year course. His independent spirit and confidence led him to open a studio of his own. Thus Lalitha Arts was born, whose name was later changed Mysore Arts and finally to Ramu Studio. Ramu Studio grew to

be the Kala Gangotri of Mysore, a meeting place for the votaries of music, theatre and fine arts. Stalwarts in the field of literature like A.N.Krishna Rao, M.N.Murthy, well-known novelist Ta. Ra. Subbarao were his intimate friends who guided him with their precious advice. Ta.Ra.Su. used to meet him frequently. He authored "Nagara Havu", a novel based on the incidents from his own and Ramu's lives. Dr.S.Srikanta Shastri, a great scholar, helped Ramu achieve maximum authenticity in his historical works through his captivating description of appropriate times and situations.

Ramu would not have taken up commercial art but for the request of great writer, friend A.N.Krishna Rao who wanted him to design the cover page for his great work "Natasarvabhouma". He also obliged Ta.Ra.Su. by designing the cover page for his last work "Durgastamana" - a picture of Madakari Nayaka on horseback. Ta.Ra.Su. spent hours with Ramu explaining his concept for the cover page. During one of those discussions, Ta.Ra.Su. quoted a lavani (a folk ballad) giving a vivid description of the ruler, which inspired a beautiful work of art- an oil painting of about three ft, of a galloping Madakari Nayaka on horse back holding a sword, against a background of

Rangaiah's portal in Durga, the fort and the rocks. This masterpiece now graces Ta.Ra.Su's living room. But it did not serve its original purpose. The publisher of the novel did not use it for the cover page, perhaps because of the high cost of printing.

During his early days, Ramu chose to work on the theme of Sri Krishna's death at the end of Dwapara Yuga. He was deeply influenced by the Mahabharata. When he presented his work before his guru Subramanya Raju, the guru felt that Ramu should concentrate on auspicious subjects as he was still young and such themes - as the one chosen now - could be worked on later in his life. This made an immediate impact on Ramu. As a result, he chose the themes of Krishna Sandhana and Viduratithya from Mahabharata to be painted in oil. This work came out very beautiful. The Maharaja of Bharatpur bought this much acclaimed painting.

Portraits And Compositions

Portraits and compositions were not new to Indian artists. This art has its own tradition as we could find references to it in Kalidasa's "Abhignana Shakuntala" and "Megha Sandesha". Ramu has

mastered painting portraits and compositions. Portrait is an replica of the mood of a person. Besides, the model's personality, posture and expression have to be captured. Portraiture requires tremendous dexterity and skill with the brush, and excellent artistry. It also needs precision. In a landscape, the height of a tree could be altered according to the context. Some details of the scene could be deleted or new ones could be added as per the requirements of the composition. But there is no scope for such alterations in realistic portraiture. As it requires tremendous precision and a sense of proportion, the artist's skill must be of a superior order. The demand for portraits done by artists decreased due to the advent of photography, and more so by colour photography. Nevertheless, the demand for portraits done by great artists still exists, thanks to the limitations of the photograph and the interest evinced by certain classes of people. A photograph taken in a fraction of a second cannot certainly capture the personality and moods of the model.Whereas a life-size portrait in oil lasts for hundreds of years. Portraits of eminent personalities, displayed permanently at public places,are oil colour paintings done by artists.

Creative works of art composed on historical themes, mythology or epics could be categorised as compositions. The artist must deeply study each and every episode and portray the individual character, attitude and ambience authentically. He must be extremely imaginative. It requires restrained and appropriate use of colours on the surface. Paintings by talented master artist become masterpieces.

Ramu gained mastery over the art of portraiture and composition. He produced a number of paintings, which are widely appreciated. Ramu's masterpieces have adorned palaces and sacred places all over the country and many parts of the world. J.S.S. Mutt of Mysore, Sri Siddaganga Mutt, Murugi Mutt, Central and State Governments, private institutions and individuals have encouraged him a great deal.

Ramu has painted life-size portraits of Gandhiji, Nehru, Dr.Ambedkar and Kengal Hanumanthaiah to be adorned at Vidhana Soudha, the state secretariat in Bangalore. A magnificent sitting portrait of former president Dr.Sarvapalli Radhakrishnan adorns the Rashtrapathi Bhavan in New Delhi. Life-size portraits of Kempegowda, the builder of Bangalore, at the Bangalore city

corporation office and the Mayo Hall are Ramu's works.

He painted a life-size picture of Mahatma Gandhi with the then viceroy of India Lord Mount Batton and his wife Edwin for display at Rashtrapathi Bhavan.

Four panels of landscapes of the size 12 x 15 ft by Ramu, in the of frescos, adorn the northern portals of the Mysore Palace.Ramu composed pictures of religious gurus, saints,dasas including Sri Madhwacharya, Sri Adi Shankaracharya, Sri Raghavendra Swamy, Sri Kanaka Dasa and Sri Purandara Dasa to be adorned at maharaja Jayachamarajendra Wodeyar's private chamber of worship. His portraits of Queen Elizabeth of Britain and USA's former president John F.Kennedy have been highly appreciated.

Ramu painted an oil colour landscape of Madhugiri of the size 4 x 5 ft and presented it to Madhugiri Muncipality. Though he did not want any money in return, his contribution did not go unrewarded. The Muncipality allotted a free site to him. He is the artist who has made his home town popular and brought glory to it.

An 8 ft high portrait of his seer Sri Raghavendra Swamy in his three incarnation, was reverentially presented to Mantralaya. But it has been transferred to the Raghavendra Swamy Mutt in Chamarajapet. As per the desire of Mysore's first chief minister Sri Chengalarayareddy and Sri Devdas Gandhi, Ramu did a composition titled "Sarvodaya" for Rajghat on the occasion of Mahatma Gandhi's death anniversary. This picture drew international attention and was admired by number of newspapers all over the world.

The museum in Bangalore and the Jaganmohana Palace in Mysore have the honour of displaying Ramu's portraits of Sri Kanaka Dasa, Sri Purandara Dasa and, Kalidasa composing "Raghuvamsha" at the royal court of Chandragupta II.

Ramu did the portraits of Sri Basaveshwara and Sri Nijaguna Shivayogi for Basava Samithi and of Sri Valmiki for Arya Nayaka Sangha.These institutions have distributed thousands of copies of these beautifully printed portraits in colour. Ramu's signature in the portrait of Basaveshwara has been replaced by Basava Samithi's name in the prints.He is deeply offended by defacements and alteration done by Basava Samithi.

Personality And Life

Ramu has a well-built physique. He is of medium height. Always, he is neatly dressed in his close-collared coat and trousers or he wears immaculate dhoti and kurta. Ramu is strikingly simple in appearance. Even at this ripe age his body is still robust, his face radiant. Sociable in nature, he knows no discrimination. A good conversationist, he has mastered the art of vividly narrating incidents from his life to the amusement of audience.His patience and tolerance as an artist are enviable.He appreciates good works of art wholeheartedly, irrespective of the creator, weather he is young or old. He teaches nuances of fine arts to those who seek them.

As there was none to compel Ramu to get married, he remained a bachelor and totally dedicated himself to art. His is a peculiar case. A mention has been previously made about one of Sri Madappa's music students and her family who took care of Ramu's boarding needs during his student days. Some distress in her family forced her to penury condition. Ramu went to her rescue and took up the responsibility of looking after the family.

Ramu's invaluable service to art has been suitably acknowledge by various institutions. He was felicitated and presented an award on the occasion of Karnataka Rajyotsava; he also won the Karnataka Lalithakala Academy award, to mention a few. But he has absolutely no airs. He thus answered my questions politely when I asked, "What have you achieved in your life?" - "Art and the world of art are as vast as the seven oceans. My accomplishment is perhaps a mere drop in these oceans. There is plenty to learn and know. I am a student all my life."

Raised in a hamlet which cannot boast of any artistic ambience, Ramu has much to offer with his assiduous way of life. He made it as an artist of high stature, not to forget the timely help he received from his fans and friends. His life has plenty of lessons for us. That art is not hereditary; anybody with a strong determination, preserverance, courage master it successfully. It requires no supernatural power, but a sustained struggle.

(Translated by V.Shailaja)

U.S. Venkataraman